ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 1 ಜನವರಿ 3, 1982 ಬೆಲೆ : 60 ಪೈಸೆ

ಎರಡು ಮೇಳಗಳು

1981ನೇ ಇಸವಿ ಕೊನೆಗೊಳ್ಳುತ್ತಿದ್ದಂತೆಯೇ ಡಿಸೆಂಬರ್ 29 ಮತ್ತು 30ರಂದು ಬೆಂಗಳೂರಿನಲ್ಲಿ ಯೂತ್ ಕಾಂಗ್ರೆಸ್ (ಐ)ನ ಅಖಿಲಭಾರತ ಮಟ್ಟದ ಸಮಾವೇಶ ಮುಗಿದು ಇದೀಗ 1982 ಜನವರಿ 1, 2 ಮತ್ತು 3ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಭಾರತ ಮಟ್ಟದ ಹಿಂದೂ ಯುವಜನ ಶಿಬಿರ ನಡೆಯುತ್ತಿದೆ. ಎರಡು ಮೇಳಗಳೂ ಬೆಂಗಳೂರು ಅರಮನೆಯ ವಿಶಾಲ ಆವರಣದಲ್ಲಿ ನಡೆದಿವೆ.

ಸರಕಾರಿ ಯಂತ್ರದ ದುರುಪಯೋಗ, ಅಧಿಕಾರದ ಬಲದಿಂದ ನಿಧಿ ಸಂಗ್ರಹಿಸಿ ನಡೆಸುವ ದುಂದುವೆಚ್ಚ, ಸಾರ್ವಜನಿಕರ ಹಿತಗಳ ಕಡೆಗಣಿಸುವಿಕೆ, ಕಾನೂನು ಮತ್ತು ನಿಯಮಗಳ ಉಲ್ಲಂಘನೆ, ಅಧಿಕಾರ ಮತ್ತು ಸ್ಥಾನಕ್ಕಾಗಿ ನಡೆಸುವ ಕಚ್ಚಾಟ, ವ್ಯಕ್ತಿನಿಷ್ಠೆ ರಾಜಕೀಯ-ಇವೆಲ್ಲವುಗಳ ಸಂಗಮವೇ ಯೂತ್ ಕಾಂಗ್ರೆಸ್ (ಐ) ಮೇಳ ಎನ್ನಬಹುದು. ಯೂತ್ ಕಾಂಗ್ರೆಸ್ (ಐ) ಸಮಾವೇಶ ಮುಗಿದರೂ, ಅದು ನಡೆಸಿರುವ ಹಾವಳಿಯನ್ನು ಯಾರೂ ಮರೆಯುವಂತಿಲ್ಲ. ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಇಂದು ದೇಶದಲ್ಲಿ ಏಕಪಕ್ಷೀಯ, ಏಕವ್ಯಕ್ತಿಯ ಅಧಿಕಾರವನ್ನು ಸ್ಥಾಪಿಸಲು ಹವಣಿಸುತ್ತಿದೆ. ತನ್ನ ಈ ಯೋಜನೆಯಲ್ಲಿ ಅತೃಪ್ತಿ, ಅಸಮಾಧಾನಗಳಿಂದ ಕೂಡಿರುವ ಯುವಜನತೆಯ ಅಗಾಧಶಕ್ತಿಯನ್ನು ಉಪಯೋಗಿಸಿಕೊಳ್ಳುವುದು ಕಾಂಗ್ರೆಸ್ಸಿನ ಇಚ್ಛೆಯಾಗಿದೆ. ಸುಮಾರು ಐದಾರು ಕೋಟಿ ರೂಪಾಯಿಗಳನ್ನು ದುಂದುವೆಚ್ಚ ಮಾಡಿ, ರಾಜೀವ್‌ಗಾಂಧಿಯನ್ನು ರಾಷ್ಟ್ರೀಯ ನಾಯಕನೆಂದು ಪ್ರಚುರಗೊಳಿಸಿ, ಯುವಜನರಿಗೆ ಆಶೆ, ಆಮಿಷಗಳನ್ನು ತೋರಿಸಿ, ಬೆಳೆಯುತ್ತಿರುವ ಎಡಪ್ರಜಾಪ್ರಭುತ್ವ ಐಕ್ಯತೆ ಮತ್ತು ದುಡಿಯುವ ಜನಕೋಟಿಯ ಹೋರಾಟಗಳ ವಿರುದ್ಧ ಅವರನ್ನು ಛೂ ಬಿಡುವುದೇ ಈ ಮೇಳದ ಉದ್ದೇಶವಾಗಿದೆ. ರಾಜೀವಗಾಂಧಿಯನ್ನು ಹಾಡಿಕೊಂಡಾಡಿರುವುದೊಂದೇ ಸಮಾವೇಶದ ಪೂರ್ಣ ಕಾರ್ಯಕ್ರಮವಾಗಿತ್ತು.

ಸಂಪಾದಕೀಯ

ಯೂತ್ ಕಾಂಗ್ರೆಸ್ (ಐ) ಮೇಳದ ಉದ್ದೇಶವು ಯುವಜನತೆಯನ್ನು ಸರ್ವಾಧಿಕಾರಿ ಶಕ್ತಿಯ ಕೈಗೊಂಬೆಯನ್ನಾಗಿ ಮಾಡುವುದಾಗಿದ್ದರೆ, ಹಿಂದೂ ಯುವಜನರ ಮೇಳವು ಹಿಂದೂತ್ವವನ್ನು ರಕ್ಷಿಸುವ ಹೆಸರಿನಲ್ಲಿ ಯುವಜನತೆಯನ್ನು ಬಹುಸಂಖ್ಯಾತ ಕೋಮುವಾದದ ಮತ್ತು ಫ್ಯಾಸಿಸ್ಟ್ ಶಕ್ತಿಗಳ ಕೈಗೊಂಬೆಯನ್ನಾಗಿ ಮಾಡುವುದಾಗಿದೆ. ಮತಾಂತರದ ಬಗ್ಗೆ ಬೊಬ್ಬಿಡುವ ಈ ಜನರಿಗೆ, ಕೋಟಿಗಟ್ಟಲೆ ಜನರನ್ನು ಎಂಜಲನ್ನ ತಿನ್ನುವ ನಾಯಿಗಳಿಗಿಂತಲೂ ತುಚ್ಛೀಕರಿಸಿ ಕಂಡಿರುವುದರ ಬಗ್ಗೆ ಈಗ ಎಚ್ಚರವಾಯಿತೇನೋ ? ವರ್ಣಾಶ್ರಮ ಆಧಾರಿತ ಹಿಂದೂ ಧರ್ಮವನ್ನು ಮತ್ತು

[ಕಡೇ ಪುಟ ನೋಡಿ]

ಜ. 19ರ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ

ರಾಷ್ಟ್ರವ್ಯಾಪಿ ವಿದ್ಯಾರ್ಥಿ ಮುಷ್ಕರ

ಜನವರಿ 19ರಂದು ನಡೆಯಲಿರುವ ಕಾರ್ಮಿಕವರ್ಗದ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿ ಅಂದು ರಾಷ್ಟ್ರದಾದ್ಯಂತ ವಿದ್ಯಾರ್ಥಿಗಳು ಮುಷ್ಕರ ಹೂಡಬೇಕೆಂದು ಎಸ್. ಎಫ್.ಐ. ಅಖಿಲಭಾರತ ಅಧಿವೇಶನ ಕರೆಕೊಟ್ಟಿದೆ.

ಎಸ್.ಎಫ್.ಐ.ನ ನಾಲ್ಕನೇ ಅಖಿಲ ಭಾರತ ಸಮ್ಮೇಳನವು 1981ರ ಡಿಸೆಂಬರ್ 25ರಿಂದ 27ರವರೆಗೆ ಮುಂಬೈಯ ಹಿಂದೂ ಕಾಲೋನಿಯಲ್ಲಿ ನಿರ್ಮಿಸಲಾಗಿದ್ದ ಕಾಂ. ಲಾಲ್‌ಬಹಾದ್ದೂರ್ ನಗರದಲ್ಲಿ ಯಶಸ್ವಿಯಾಗಿ ಜರುಗಿತು.

7,14,074 ಸದಸ್ಯರನ್ನು ಪ್ರತಿನಿಧಿಸಿ 579 ಪ್ರತಿನಿಧಿಗಳು ಮತ್ತು 87 ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪ್ರತಿನಿಧಿಗಳಲ್ಲಿ 77 ವಿದ್ಯಾರ್ಥಿನಿಯರು ಸೇರಿದ್ದರು. ಇಬ್ಬರು ಲೋಕಸಭಾ ಸದಸ್ಯರು ಮತ್ತು ಇಬ್ಬರು ವಿಧಾನಸಭಾ ಸದಸ್ಯರು ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಪ್ರತಿನಿಧಿಗಳಲ್ಲಿ ಒಬ್ಬ ಅಂಧ ವಿದ್ಯಾರ್ಥಿಯೂ ಸೇರಿದ್ದರು. ಕರ್ನಾಟಕದಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಡಿಸೆಂಬರ್ 25ರಂದು ಬೆಳಿಗ್ಗೆ ಎಸ್. ಎಫ್. ಐ. ಅಧ್ಯಕ್ಷ ಕಾಂ. ಎಂ. ಎ. ಬೇಬಿಯವರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನ ಆರಂಭವಾಯಿತು. ಆರಂಭದಲ್ಲಿ ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಡಾ॥ ಅನೀಸ್ ಸಯ್ಯದ್ ಮತ್ತು ಪ್ರೊ॥ ಇ ಎನ್. ಮಾಂಜ್ರೇಕರವರು ಸ್ವಾಗತಿಸಿದರು.

ಅಲೀಗಢ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಮುಸ್ಲಿಂ ಮತಾಂತರ ವಿರುದ್ಧ ಸಿಡಿದೆದ್ದ ಖ್ಯಾತ ಇತಿಹಾಸ ತಜ್ಞ ಪ್ರೊ॥ ಇರ್ಫಾನ್‌ಹಬೀಬ್‌ರು ಸಮ್ಮೇಳನವನ್ನು ಉದ್ಘಾಟಿಸಿದರು.

ಪಾಟನಾ ಸಮ್ಮೇಳನದ ನಂತರದ 3 ವರ್ಷಗಳ ಅವಧಿಯಲ್ಲಿ ಜಗತ್ತಿನಾದ್ಯಂತ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದ ಮೌಲ್ಯಗಳಿಗಾಗಿ ದುಡಿದು ಮಡಿದ ಹುತಾತ್ಮರಿಗೆ ಸಮ್ಮೇಳನವು ಸಂತಾಪ ಸೂಚಿಸಿತು. ಈ ಅವಧಿಯಲ್ಲಿ ಪೋಲೀಸರ ಚಿತ್ರಹಿಂಸೆಗೆ, ಗೂಂಡಾದಾಳಿಗೆ ಬಲಿಯಾದ 12 ಜನ ಎಸ್.ಎಫ್.ಐ. ಸಂಗಾತಿಗಳಿಗೆ ಸಮ್ಮೇಳನ ಶ್ರದ್ಧಾಂಜಲಿ ಸಲ್ಲಿಸಿತು.

[ಕಡೇ ಪುಟ ನೋಡಿ]

ಗೋಲನ್ ದಿನ್ನೆಗಳನ್ನು ಸೇರಿಸಿಕೊಳ್ಳುವುದರ ಮೂಲಕ

ಇಸ್ರಾಯೇಲ್‌ನಿಂದ ಆಕ್ರಮಣದ ಪುನರಾವರ್ತನೆ

ನ್ಯಾಯ ಸಮ್ಮತವಲ್ಲದ ರೀತಿಯಲ್ಲಿ ಅಧಿಕೃತವಾಗಿ ನಡೆ… ಸೇರಬೇಕಾಗಿರುವ ಗೋಲನ್ ದಿನ್ನೆ ಪ್ರದೇಶಗಳನ್ನು ಕಾನೂನು ಬಾಹಿರವಾಗಿಯೂ, ಕೆದಕುವ ರೀತಿಯಲ್ಲೂ ತಮ್ಮದಾಗಿ ಸಾರಿ ಸೇರಿಸಿಕೊಂಡಿರುವ ಇಸ್ರಾಯೇಲ್‌ನ ಯಹೂದಿವಾದಿಆಡಳಿತಗಾರರು (ZIONIST [RU]LERS) ಅರಬ್ ಜಗತ್ತಿನ ಮೇಲೆ ಆಕ್ರಮಣವನ್ನು ಪುನರಾವರ್ತಿ[ಸಿ]ದ್ದಾರೆ. ಸಿರಿಯಾಕ್ಕೆ ಸೇರಿರುವ [ಈ] ಪ್ರದೇಶವನ್ನು ತಮ್ಮದಾಗಿ ಸಾರಿ[ಕೊ]ಳ್ಳುವ ತೀರ್ಮಾನವನ್ನು ಇಸ್ರಾ[ಯೇ]ಲಿನ ಆಡಳಿತಗಾರರು ಅರು[ವ]ತ್ತೆಗಳಲ್ಲಿ ಮಾಡಿರುವರು.

ಗೋಲನ್ ದಿನ್ನೆ ಪ್ರದೇಶವು ಸಿರಿಯಾಕ್ಕೆ ಸೇರಿದೆ. 1967ರ ಯುದ್ಧದಲ್ಲಿ ಇಸ್ರಾಯೇಲ್ ಅದನ್ನು ಆಕ್ರಮಿಸಿತು. ಅಂದಿನಿಂದ ಇಸ್ರಾಯೇಲಿನ ಆಕ್ರಮಣಕಾರಿಗಳು ಅಲ್ಲೇ ಬೀಡುಬಿಟ್ಟಿದ್ದರು. ಸಿರಿಯಾಕ್ಕೆ ಸೇರಿರುವ ಗೋಲನ್ ದಿನ್ನೆ ಪ್ರದೇಶ, ಜೋರ್ಡಾನಿಗೆ ಸೇರಿರುವ ಪಶ್ಚಿಮ ದಂಡೆ ಪ್ರದೇಶ ಮತ್ತು ಈಜಿಪ್ಟಿಗೆ ಸೇರಿರುವ ಪ್ರದೇಶ (ಕೇಂಪ್ ಡೇವಿಡ್ ಒಪ್ಪಂದದಲ್ಲಿ ಸೇರಿಸಲ್ಪಟ್ಟಿರುವ)ಗಳಿಂದ ಇಸ್ರಾಯೇಲ್ ಆಕ್ರಮಣವನ್ನು ಹಿಂತೆಗೆದು ತೆರವು ಮಾಡಬೇಕೆಂದು ಜಾಗತಿಕ ಅಭಿಪ್ರಾಯವಾಗಿತ್ತು. ಜಾಗತಿಕ ಸಂಸ್ಥೆಯ ಎಲ್ಲಾ ನಿರ್ಣಯಗಳೂ ಇದೇ ರೀತಿಯಲ್ಲಿ ಆಧಾರಿತವಾಗಿದ್ದುವು. ಇವೆಲ್ಲವನ್ನೂ ಕಡೆಗಣಿಸಿ, ಇಸ್ರಾಯೇಲಿನ ಆಡಳಿತಗಾರರು ಇದೀಗ ಗೋಲನ್ ದಿನ್ನೆಗಳನ್ನು ತಮ್ಮದನ್ನಾಗಿಸಿಕೊಂಡು, ತಮ್ಮ ಆಕ್ರಮಣಕಾರಿ ನೀತಿಗಳಿಗೆ ಬೆಂಬಲವಾಗಿ ಸೈನಿಕರನ್ನು ಸಜ್ಜುಗೊಳಿಸಿ ನಿಲ್ಲಿಸಿದ್ದಾರೆ.

1947ರಲ್ಲಿ ಜಾಗತಿಕ ಸಂಸ್ಥೆಯು ಪೇಲೆಸ್ತೀನ್ ಅನ್ನು ವಿಭಜಿಸಿ ಇಸ್ರಾಯೇಲ್ ಅನ್ನು ಅಸ್ತಿತ್ವಕ್ಕೆ ತರಲು ತೀರ್ಮಾನಿಸಿದಂತೆ ಇಸ್ರಾಯೇಲ್ ಅಸ್ತಿತ್ವಕ್ಕೆ ಬಂದಾಗಿನಿಂದ ಅರಬ್ ಜಗತ್ತಿನ ಮೇಲೆ ಯುದ್ಧಸಾರಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದೆ. ಆಕ್ರಮಣಮಾಡಿ ಸ್ವಾಧೀನಪಡಿಸಿಕೊಂಡಿರುವ ಅರಬ ಪ್ರದೇಶಗಳನ್ನು ಹೆಚ್ಚು ಹೆಚ್ಚಾಗಿ ಇಸ್ರಾಯೇಲ್ ತನ್ನದನ್ನಾಗಿಸಿಕೊಳ್ಳುತ್ತಾ ಬಂದಿದೆ. ಇಸ್ರಾಯೇಲ್ ಗೋಲನ್ ದಿನ್ನೆಗಳನ್ನು ತನ್ನದನ್ನಾಗಿ ಸೇರಿಸಿಕೊಂಡಿರುವುದು ಕ್ರಮಬದ್ಧವಲ್ಲವೆಂದೂ, ಅದು ತಪ್ಪೆಂದೂ, ಜನವರಿ 5ರೊಳಗೆ ತಮ್ಮ ನಿರ್ಣಯವನ್ನು ಅವರು ಬದಲಾಯಿಸಬೇಕೆಂದೂ ಜಾಗತಿಕ ಸಂಸ್ಥೆ ಘೋಷಿಸಿದೆ. ಆದರೆ ಅದಕ್ಕೆ ಈಗಾಗಲೇ ಇಸ್ರಾಯೇಲ್ "ಸಾಧ್ಯವಿಲ್ಲ" ಎಂದು ಹೇಳಿದೆ.

ಜಗತ್ತಿನಾದ್ಯಂತ ಇಸ್ರಾಯೇಲನ್ನು ಖಂಡಿಸುವುದು ಕಂಡುಬಂದುದರಿಂದ ಇಸ್ರಾಯೇಲಿನೊಂದಿಗೆ ತಾನು ನವೆಂಬರ್ 30ಕ್ಕೆ ಮಾಡಿಕೊಂಡ ಪರಸ್ಪರ ಸಹಕಾರದ ಒಪ್ಪಂದವನ್ನು ಅಮಾನತು ಮಾಡುವ ಸೌಜನ್ಯವನ್ನು ಅಮೇರಿಕಾ ಸಂಯುಕ್ತ ಸಂಸ್ಥಾನ ಮಾಡಬೇಕಾಗಿ ಬಂತು. ಅಮೇರಿಕಾ ಸಂಯುಕ್ತ ಸಂಸ್ಥಾನದ ಈ ಕ್ರಮದಿಂದ ಸಿಟ್ಟಿಗೆದ್ದ ಇಸ್ರಾಯೇಲಿನ ಪ್ರಧಾನ ಮಂತ್ರಿ ಮೆನಾಚೆಮ್ ಬೆಗಿನ್ ಅವರು ಒಪ್ಪಂದವನ್ನು ರದ್ದುಗೊಳಿಸಿ, ನಾವು ಯಾರ ಸಹಾಯವೂ ಇಲ್ಲದೆ ಬದುಕುವೆವು ಎಂದು ಘೋಷಿಸಿದರು. ಇಸ್ರಾಯೇಲ್ ಹೀಗೆ ಘೋಷಿಸಲು ಕಾರಣವಿದೆ-ಅದೇನೆಂದರೆ ಅಮೇರಿಕಾ ಸಂಯುಕ್ತ ಸಂಸ್ಥಾನವು ಮಾಡಿರುವ ಗಲಭೆಗಳೆಲ್ಲಾ ಕೇವಲ ಜಾಗತಿಕ ಅಭಿಪ್ರಾಯವನ್ನು ಮೋಸಗೊಳಿಸಲು

[ಕಡೇ ಪುಟ ನೋಡಿ]

ಜನವರಿ 19ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿರಿ

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

[ಡಿಸೆಂಬರ್ 11ರಿಂದ 14ರ ವರೆಗೆ ಮಂಗಳೂರಿನಲ್ಲಿ ನಡೆದ ಪಕ್ಷದ 11ನೇ ರಾಜ್ಯಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳಲ್ಲಿ ಕೆಲವನ್ನು 20-12-81ರ ಐಕ್ಯರಂಗದಲ್ಲಿ ಪ್ರಕಟಿಸಿದ್ದೆವು. ಉಳಿದವುಗಳನ್ನು ಈಗ ಸಂಕ್ಷಿಪ್ತವಾಗಿ ಪ್ರಕಟಿಸುತ್ತಿದ್ದೇವೆ.]

ಪೋಲೀಸರ ದಬ್ಬಾಳಿಕೆಯ ಖಂಡನೆ

ಕಳೆದ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರ್ಮಿಕ ಕೇಂದ್ರವಾದ ದಾಂಡೇಲಿಯಲ್ಲಿ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ಅಮಾನುಷ ದೌರ್ಜನ್ಯವನ್ನು ಈ ಸಮ್ಮೇಳನ ಬಲವಾಗಿ ಖಂಡಿಸುವುದಲ್ಲದೇ, ಈ ದಬ್ಬಾಳಿಕೆಯ ನ್ಯಾಯಾಂಗ ತನಿಖೆಯಾಗಬೇಕೆಂದೂ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕೆಂದೂ ಈ ಸಮ್ಮೇಳನ ಸರಕಾರವನ್ನು ಒತ್ತಾಯಪಡಿಸುತ್ತದೆ.

ಎಸ್. ಎಫ್. ಐ.ನ ರಾಜ್ಯ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಮತ್ತಿನ್ನಿತರರ ಮೇಲೆ ಹೊಸಪೇಟೆಯಲ್ಲಿ ಪೋಲೀಸರು ದಬ್ಬಾಳಿಕೆ ನಡೆಸಿದ್ದು, ಬೆಂಗಳೂರಿನ ವಿದ್ಯಾರ್ಥಿ ಮುಖಂಡ ಶ್ರೀ ಆಂಜನಪ್ಪನವರ ಮೇಲೆ ನಡೆಸಿದ ಗೂಂಡಾಗಿರಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನವು ಬಲವಾಗಿ ಖಂಡಿಸುತ್ತದೆ.



ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಇ.ಎಂ.ಎಸ್. ಮಾತನಾಡುತ್ತಿರುವುದು

ಪರಿಹಾರ ಒದಗಿಸಲು ಒತ್ತಾಯ

1976ರಲ್ಲಿ ಕೇಂದ್ರ ಸರಕಾರದಿಂದ ನಿಯಮಿಸಲ್ಪಟ್ಟ ಒಂದು ಸಮಿತಿಯು ರಾಜ್ಯದ ಹನ್ನೊಂಬತ್ತು ಜಿಲ್ಲೆಯ ಮೂವತ್ತೆರಡು ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಿ, ರಾಜ್ಯಸರಕಾರವು ಕೇಂದ್ರ ಸರಕಾರದ ಸಹಾಯದಿಂದ ಈ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ಒದಗಿಸಲು ಸೂಚಿಸಿತ್ತು.

ವಾಸ್ತವವಾಗಿ ರಾಜ್ಯದಲ್ಲಿ ನೂರಕ್ಕಿಂತಲೂ ಹೆಚ್ಚು ತಾಲ್ಲೂಕುಗಳಲ್ಲಿ ಅದರಲ್ಲಿ ಮುಖ್ಯವಾಗಿ ರಾಯಚೂರು, ಕೋಲಾರ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಭೀಕರ ಬರಗಾಲ ಮೇಲಿಂದಮೇಲೆ ಬೀಳುತ್ತಿದ್ದು, ರೈತರು ಕೊಳ್ಳುವ ಶಕ್ತಿಯನ್ನು ಕಳೆದುಕೊಂಡಿದ್ದು, ಕೃಷಿಕಾರ್ಮಿಕರು ಕೂಲಿ ಕೆಲಸ ಸಿಗದೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಇಷ್ಟು ಗಂಭೀರ ಪರಿಸ್ಥಿತಿ ಉದ್ಭವವಾಗಿದ್ದ ಹಿನ್ನೆಲೆಯಲ್ಲಿ ಸರಕಾರ ಯಾವ ಕ್ರಮ ಕೈಗೊಂಡಿಲ್ಲ.



ಸಮ್ಮೇಳನದ ಪ್ರಾರಂಭ ದಿನದಂದು ನಡೆದ ಧ್ವಜಾರೋಹಣದ ದೃಶ್ಯ

ಬರಗಾಲವನ್ನು ಎದುರಿಸಲು ಶಾಶ್ವತಪರಿಹಾರ ಒದಗಿಸಲು ಈ ಪ್ರದೇಶವನ್ನು ನಿರಂತರ ಬರಗಾಲ ಪ್ರದೇಶಗಳೆಂದು ಘೋಷಿಸಲು ಹಾಗೂ ಈಗಾಗಲೇಯೋಜನೆಯಲ್ಲಿದ್ದ ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮಾ ಯೋಜನೆ, ಕೋಲಾರ ಕಾವೇರಿ ಯೋಜನೆ, ಮಲಪ್ರಭಾ ಯೋಜನೆ ಹಾಗೂ ಕಾಳಿಂಜಿಯಾ ಯೋಜನೆಯಲ್ಲದೆ ಇನ್ನುಳಿದ ನೀರೊದಗಿಸುವ ಯೋಜನೆಗಳನ್ನು ಕೂಡಲೇ ಕಾರ್ಯಗತಗೊಳಿಸಲು ಸರಕಾರವನ್ನು ಒತ್ತಾಯಿಸಿ ಕೂಡಲೇ ರಾಜ್ಯಡಾದ್ಯಂತ ಚಳುವಳಿ ನಡೆಸುವಂತೆ ಸಮ್ಮೇಳನ ಕರೆಕೊಟ್ಟಿದೆ.

ರೇಷ್ಮೆ ಉದ್ಯಮ ಸಮಸ್ಯೆ

ವಿಶ್ವಬ್ಯಾಂಕಿನಿಂದ ರೇಷ್ಮೆ ಅಧಿಕ ಉತ್ಪಾದನೆಯ ಅಭಿವೃದ್ಧಿಗಾಗಿ ಸರಕಾರ ಕೋಟ್ಯಾಂತರ ರೂ. ಸಾಲ ಪಡೆದಿರುವ ಈ ಪರಿಸ್ಥಿತಿಯಲ್ಲಿ, ಕರ್ನಾಟಕದ ರೇಷ್ಮೆ ಉತ್ಪಾದಕ ರೈತರು ಊಜಿನೊಣದ ಹಾವಳಿಯಿಂದ ಹಾಳಾಗಿರುವುದನ್ನು, ಸಮಸ್ಯೆ ಬಗೆಹರಿಸಲು ಸರಕಾರ ವಿಫಲವಾಗಿದೆ. ವಿದೇಶಿ ವಿನಿಮಯದಿಂದ ದೊರಕುವ ಆದಾಯ ದೃಷ್ಟಿಯಿಂದಲೂ ರೈತರು ಮತ್ತು ಬೆಳೆಗಾರರು; ಗೂಡುಬಿಚ್ಚುವವರು, ಹುರಿಮಾಡುವವರು, ಭಟ್ಟಿ ತಯಾರಿಸುವ ಇತರೆ ಕಾರ್ಮಿಕರು ಹೀಗೆ ಇಡೀ ರೇಷ್ಮೆ ಉದ್ದಿಮೆಯಲ್ಲಿ ತೊಡಗಿರುವ ಎಲ್ಲಾ ವಿಭಾಗದ ಲಕ್ಷಾಂತರ ಜನರಿಗೆ ತೊಂದರೆಯಾಗಿದೆ.

ರೇಷ್ಮೆಯನ್ನು ಕೇಂದ್ರ ಸರಕಾರವು ವಿದೇಶಗಳಿಂದ ಆಮದು ಮಾಡುತ್ತಿರುವುದರಿಂದ ಬೆಳೆಗಾರರಿಗೆ ನ್ಯಾಯ ಬೆಲೆ ದೊರಕುವುದಿಲ್ಲ ದೊಡ್ಡ ಉದ್ದಿಮೆಗಳ ಮಾಲೀಕರುಗಳನ್ನು ಮತ್ತಷ್ಟು ಬೆಳೆಸುವ ದೃಷ್ಟಿಯಿಂದ ಈ ಆಮದು, ನೀತಿಯ ವ್ಯವಸ್ಥೆ ಮಾಡಿರುವುದು. ಇದರಿಂದ ಚಿಕ್ಕ ಉದ್ದಿಮೆಗಳಿಗೆ ಮತ್ತು ಉದ್ಯಮದ ಕಾರ್ಮಿಕರಿಗೆ ಉದ್ಯೋಗವೇ ನಿಂತುಹೋಗುವ ಭೀಕರ ಪರಿಸ್ಥಿತಿ ಇದೆ. ಈಗಾಗಲೇ ಶೇ. 75ರಷ್ಟು ಪವರ್ ಲೂಂಗಳು ನಿಂತುಹೋಗಿವೆ.

ಈ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಸರಕಾರ ಕೂಡಲೇ ಕ್ರಮ ತೆಗೆದುಕೊಂಡು ರೇಷ್ಮೆ ಆಮದು ನಿಲ್ಲಿಸಬೇಕೆಂದು, ಬೆಳೆಗಾರರಿಗೆ ಊಜಿನೊಣದ ಹಾವಳಿಯನ್ನು ತಪ್ಪಿಸಲು ನೆರವಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಕಾರ್ಮಿಕ ಸಂಘಗಳ ಮೇಲೆ ದಾಳಿ

ಜನತೆ ಬೆಲೆಏರಿಕೆ, ಬಡತನ, ನಿರುದ್ಯೋಗಗಳಿಂದ ತತ್ತರಿಸುತ್ತಿದ್ದು ಗುಂಡೂರಾವ್ ಸರಕಾರ ಜನತೆಯ ಸಮಸ್ಯೆಗಳನ್ನು ಪರಿಹರಿಸುವ ಬದಲು ದುಡಿಯುವ ಜನತೆಯ ಮೇಲೆ ದಾಳಿ ನಡೆಸುತ್ತಾ ಬಂದಿದೆ. ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡುವರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರ ಮೇಲೆ ಹಲ್ಲೆ ನಡೆಸುತ್ತಿದೆ. ಉದಾಹರಣೆ ಬೆಲೆಏರಿಕೆ ವಿರುದ್ಧ ಮತ್ತು ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆಕೇಳಿದ ರೈತರ ಮೇಲೆ ಗುಂಡಿನ ಮಳೆಯನ್ನು ಸುರಿಸಿದೆ.

ಬೆಂಗಳೂರಿನ ಮೈಕೋ ಮತ್ತು ಐ.ಟಿ.ಸಿ. ಫ್ಯಾಕ್ಟರಿಗಳ ಕಾರ್ಮಿಕರು ತಮ್ಮ ತಮ್ಮ ಸಂಘಗಳ ಚಟುವಟಿಕೆಯನ್ನು ಕೂಡ ನಡೆಸಲು ಅವಕಾಶ ಕೊಡದ ಕಾಂಗ್ರೆಸ್ ಗೂಂಡಾಗಳಿಂದ ಸಂಘಟನೆಗಳನ್ನು ನಾಶ ಮಾಡ ಹೊರಟಿದ್ದು, ದಾಂಡೇಲಿ, ಸಂಸೆಯ ಟೀತೋಟದ, ಕುದುರೆಮುಖದ ಎಚ್. ಎಸ್.ಸಿ.ಎಲ್. ಕಾರ್ಮಿಕರ ಮೇಲೆ ಪೋಲೀಸ್ ದಬ್ಬಾಳಿಕೆ ನಡೆದಿದೆ. ಬೆಂಗಳೂರಿನಲ್ಲಿ ಸದಾಕಾಲ ಸೆ.35ನ್ನು ಹಾಕಿ ಸಭೆ ಮೆರವಣಿಗೆ ನಡೆಸುವ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ.

ಪತ್ರಿಕಾ ಕಚೇರಿಗಳ ಮೇಲೆ, ಪತ್ರಿಕಾ ವರದಿಗಾರರ ಮೇಲೆ ನಡೆಯುತ್ತಿರುವ ಸತತ ದಾಳಿ ಇವೆಲ್ಲಾ ಸರ್ಕಾರದ ಸರ್ವಾಧಿಕಾರಿ ಲಕ್ಷಣಗಳನ್ನು ಬಯಲಿಗೆಳೆಯುತ್ತವೆ.



ಸಮ್ಮೇಳನದಲ್ಲಿ ಪ್ರತಿನಿಧಿಗಳು ಪಾಲ್ಗೊಂಡಿರುವ ದೃಶ್ಯ

ಸರಕಾರದ ಕಾರ್ಮಿಕ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಈ ಸಮ್ಮೇಳನ ಉಗ್ರವಾಗಿ ಖಂಡಿಸುತ್ತದೆ.


ಬೆಲೆ ಏರಿಕೆ ವಿರುದ್ಧ

ಜೀವನಾವಶ್ಯಕ ವಸ್ತುಗಳ ಬೆಲೆ ನಿಯಂತ್ರಿಸುವ ಆಶ್ವಾಸನೆಯೊಂದಿಗೆ 1980ರ ಜನವರಿಯಲ್ಲಿ ಮರಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರವು ಬೆಲೆಗಳನ್ನು ಇಳಿಸುವ ಬದಲು ಎಲ್ಲಾ ವಸ್ತುಗಳ ಬೆಲೆಗಳು ಹಲವು ಪಟ್ಟು ಹೆಚ್ಚಾಗುವಂಥ ಪರಿಸ್ಥಿತಿಯನ್ನು ನಿರ್ಮಿಸಿದೆ. ಅಕ್ರಮ ದಾಸ್ತಾನು, ಕಳ್ಳ ಸಾಗಾಣಿಕೆ, ಕಾಳ ಸಂತೆ ಮತ್ತು ಕೃತಕ ಅಭಾವ ಅವ್ಯಾಹತವಾಗಿ ಮುಂದುವರಿಯುತ್ತಿವೆ. ಲಾಭಬಡುಕ ಮತ್ತು ಸಮಾಜ ಘಾತಕ ಶಕ್ತಿಗಳ ವಿರುದ್ಧ ಸರಕಾರವು ನಿಷ್ಕ್ರಿಯವಾಗಿದೆಯಲ್ಲದೇ ಅಧಿಕಾರಿಗಳೂ, ಕಾಂಗ್ರೆಸ್ ಪುಢಾರಿಗಳೂ ಇವರೊಂದಿಗೆ ಶಾಮೀಲಾಗಿದ್ದಾರೆ.

ಇಂದಿರಾಗಾಂಧಿ ಅಧಿಕಾರಕ್ಕೆ ಮರಳಿಬಂದ ನಂತರ ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆ ವಿಪರೀತವಾಗಿ ಹೆಚ್ಚಿದೆ. ಕೊರತೆ ಹಣ ಸೃಷ್ಟಿಯು ಮೊತ್ತ ಈ ಎರಡು ವರ್ಷಗಳಲ್ಲಿ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿದೆ. ಉಕ್ಕು, ಪೆಟ್ರೋಲಿಯಂ, ರಸಗೊಬ್ಬರ, ಬಟ್ಟೆ, ಸಿಮೆಂಟ್ ಮೊದಲಾದ ವಸ್ತುಗಳ ಬೆಲೆಯನ್ನು ಸರಕಾರವೇ ಭಾರೀ ಪ್ರಮಾಣದಲ್ಲಿ ಹೆಚ್ಚಿಸಿದೆ. ಸರ್ಕಾರ ತನ್ನ ಸಂಪನ್ಮೂಲಗಳನ್ನು ಕೃಷಿ, ಕೈಗಾರಿಕೆ ಮೊದಲಾದ ಆರ್ಥಿಕ ಅಭಿವೃದ್ಧಿಗಳಿಗೆ ವಿನಿಯೋಗಿಸುವ ಬದಲು ರಕ್ಷಣೆ, ಪೋಲೀಸು, ಬಂಡವಾಳಶಾಹಿಗಳಿಗೆ ಸಹಾಯಧನ ಕೊಡಲಿಕ್ಕೂ ಉಪಯೋಗ ಮಾಡುತ್ತಲಿದೆ. ಐ.ಎಂ.ಎಫ್. ನಿಂದ ಕೋಟ್ಯಾಂತರ ರೂ. ಸಾಲ ತೆಗೆದುಕೊಳ್ಳಲಾಗಿದೆಯಲ್ಲದೇ ಐ.ಎಂ.ಎಫ್.ನವರನ್ನು ತೃಪ್ತಿಪಡಿಸಲು ರೇಲ್ವೆ ಸರಕುಸಾಗಾಣಿಕೆ ದರ ಹೆಚ್ಚಿಸಲಾಗಿದೆ. ಇದರಿಂದಾಗಿ ಆರ್ಥಿಕ ಅಭಿವೃದ್ಧಿ ಸ್ಥಗಿತವಾಗುತ್ತಿದ್ದು ಬೆಲೆಏರಿಕೆ ಮತ್ತು-ಹಣದುಬ್ಬರದ ಸಮಸ್ಯೆ ಉಲ್ಬಣಗೊಳ್ಳುತ್ತಿದೆ.

ಜೀವನಾವಶ್ಯಕ ವಸ್ತುಗಳ ಸಗಟು ವ್ಯಾಪಾರವನ್ನು ರಾಷ್ಟ್ರೀಕರಿಸುವ ಮೂಲಕವೂ, ಪಡಿತರ ಪದ್ಧತಿಯಲ್ಲಿ ಕಡಿಮೆ ಬೆಲೆಯಲ್ಲಿ ವಸ್ತುಗಳನ್ನು ಸರಬರಾಜು ಮಾಡುವುದರ ಮೂಲಕವೂ ಪರಿಣಾಮಕಾರಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕವೂ ಬೆಲೆ ಏರಿಕೆಯನ್ನು ನಿಯಂತ್ರಿಸಲು ಈ ಸಮ್ಮೇಳನವು ಸರಕಾರವನ್ನು ಒತ್ತಾಯಿಸುತ್ತದೆ.

(6ನೇ ಪುಟ ನೋಡಿ)



ಬಹಿರಂಗ ಸಭೆಯಲ್ಲಿ ಭಾಗವಹಿಸಿರುವ ಪ್ರಚಂಡ ಜನಸಮೂಹ

ಜೀವನಮಟ್ಟದ ಮೇಲಿನ ಪ್ರಹಾರವನ್ನು ಎದುರಿಸಲು

ಕಾರ್ಮಿಕವರ್ಗದ ಹೆಚ್ಚುತ್ತಿರುವ ಹೋರಾಟಗಳು

ಕಳೆದ ಒಂದೂ ವರ್ಷದಲ್ಲಿ ದೇಶಾದ್ಯಂತ ಕಾರ್ಮಿಕರ ವಿವಿಧ ವಿಭಾಗಗಳು ಹಲವು ಹೋರಾಟಗಳನ್ನು ನಡೆಸಿದ್ದಾರೆ. ಇವುಗಳಲ್ಲಿ ಬಹಳಷ್ಟು ದೀರ್ಘ ಕಾಲ ನಡೆದ ಹೋರಾಟಗಳು ಬಂಡವಾಳಶಾಹಿಗಳು ಹಾಗೂ ಸ್ವತಃ ಸರಕಾರ ಜಾರಿಮಾಡಬೇಕಾದ ಒಪ್ಪಂದವನ್ನು ಪರಿಪಾಲಿಸದೇ ಇದ್ದುದರಿಂದಾಗಿ ಹಲವು ಹೋರಾಟಗಳು ನಡೆದವು. ಇನ್ನು ಹಲವು ಕಡೆ ಇಂಟಕ್‌ನ ಚಮಚಾ ಯೂನಿಯನ್‌ಗಳೊಂದಿಗೆ ಮಾಡಿಕೊಂಡ ಕಾರ್ಮಿಕರಿಗೆ ದ್ರೋಹ ಬಗೆಯುವ ಒಪ್ಪಂದಗಳನ್ನು ವಿರೋಧಿಸಿ ಹೋರಾಟಗಳು ನಡೆದವು. ಇಂತಹ ಎಲ್ಲಾ ಸಂದರ್ಭಗಳಲ್ಲಿ ಖಾಸಗೀ ಮಾಲಕರ ಗೂಂಡಾಪಡೆಗಳ, ಸರ್ಕಾರೀ ಪೋಲೀಸ್ ಪಡೆಗಳ ಹಾಗೂ ಕಾಂಗ್ರೆ ಬೆಂಬಲಿಗ ಇಂಟಕ್ ಚಮಚಾಪಡೆಗಳ ದಾಳಿಗಳನ್ನು ಕಾರ್ಮಿಕರು ಧೀರತನದಿಂದ ಎದುರಿಸಿದ್ದಾರೆ. ಬಂಡವಾಳಶಾಹಿಗಳು, ಗುತ್ತೇದಾರಿಗಳು ಹಾಗೂ ಬಹುರಾಷ್ಟ್ರೀಯ ಶೋ[illegible]ರ [illegible]ಸಲು ಇಂದಿರಾ ಸರಕಾರ ತಂದಿರುವ ಎನ್. ಎಸ್. ಎ., ಇಸ್. ಎಂ. ಎಗಳ ವಿರುದ್ಧ ರಾಜ್ಯವ್ಯಾಪೀ, ರಾಷ್ಟ್ರವ್ಯಾಪೀ ಪ್ರಬಲ ಪ್ರತಿಭಟನೆಗಳು ವ್ಯಕ್ತಪಟ್ಟಿವೆ. ಹೀಗಿದ್ದರೂ ತನ್ನದು ಕಾರ್ಮಿಕವರ್ಗದ ಹಿತಕ ಸರಕಾರ, ಕಾರ್ಮಿಕವರ್ಗ ತನ್ನ ಬೆನ್ನ ಹಿಂದಿದೆ ಎಂದು ನಾಚಿಕೆಯಿಲ್ಲದೆ ಹೇಳಿಕೊಳ್ಳುತ್ತಿರುವವರ ಮುಖಕ್ಕೆ ಬಲವಾಗಿ ಉಗುಳುವ ದಿನವಾಗಲಿ ಈ ಜನವರಿ 19!

ಹತೋಟಿ ತಪ್ಪಿದ ಹಣದುಬ್ಬರ, ಏರುತ್ತಿರುವ ಬೆಲೆಗಳಿಂದ ಜನರ ಜೀವನ ಮಟ್ಟದಲ್ಲಾಗಿರುವ ಸವೆತ, ಹೆಚ್ಚುತ್ತಿರುವ ಕರಭಾರ ಹಾಗೂ ನಿರುದ್ಯೋಗ ನಮ್ಮ ದೇಶ ಎದುರಿಸುತ್ತಿರುವ ಗಂಭೀರ ಆರ್ಥಿಕ ದುಃಸ್ಥಿತಿಯ ಕೆಲವು ಲಕ್ಷಣಗಳು. ಈ ದುಃಸ್ಥಿತಿಯಿಂದ ಪಾರಾಗಲು ಆಳುವ ಕಾಂಗ್ರೆಸ್(ಐ) ಅನುಸರಿಸುತ್ತಿರುವ ಮಾರ್ಗವೆಂದರೆ ರೈತಾಪಿವರ್ಗಕ್ಕೆ ಯೋಗ್ಯ ಪ್ರತಿಫಲ ಕೊಡದೆ ಅವರನ್ನು ತೀವ್ರ ಶೋಷಣೆಗೆ ಗುರಿಪಡಿಸುವುದು ಹಾಗೂ ಕಾರ್ಮಿಕರು, ನೌಕರರು, ಕೃಷಿಕೂಲಿಗಾರರು ಹೀಗೆ ಎಲ್ಲರ ಆದಾಯದ ಮೇಲೆ ತೀವ್ರ ಪ್ರಹಾರ ನಡೆಸುವುದು, ಅವರ ಹಕ್ಕುಗಳನ್ನು ಕಸಿದುಕೊಳ್ಳುವುದು. ಆಳುವ ವರ್ಗಗಳ ಹಾಗೂ ಅವರ ಪ್ರತಿನಿಧಿಯಾದ ಕಾಂಗ್ರೆಸ್(ಐ) ಸರಕಾರದ ಈ ಹಲ್ಲೆಗಳನ್ನು ಕಾರ್ಮಿಕ ವರ್ಗದ ವಿವಿಧ ವಿಭಾಗಗಳು ಪ್ರಬಲವಾಗಿ ಪ್ರತಿಭಟಿಸಿವೆ. ತೀವ್ರ ಹೋರಾಟ ನಡೆಸಿವೆ. ಕಳೆದ 12–13 ತಿಂಗಳುಗಳಲ್ಲಿ ಇಂತಹ ಹೋರಾಟಗಳು ಸಂಖ್ಯೆಯಲ್ಲೂ, ತೀವ್ರತೆಯಲ್ಲೂ ಬಹಳಷ್ಟು ಹೆಚ್ಚಿವೆ. ಈ ಎಲ್ಲಾ ಹೋರಾಟಗಳಿಂದ ಪಾಠಕಲಿತ ಭಾರತದ ಕಾರ್ಮಿಕ ವರ್ಗ ಜನವರಿ 19ರ ಚಾರಿತ್ರಿಕ ಮುಷ್ಕರಕ್ಕೆ ತಯಾರಿ ನಡೆಸುತ್ತಿರುವ ಸಂದರ್ಭದಲ್ಲಿ ಕಳೆದ 12-13 ತಿಂಗಳ ಅವಧಿಯಲ್ಲಿ ಕಾರ್ಮಿಕ ವರ್ಗದ ವಿವಿಧ ವಿಭಾಗಗಳು ನಡೆಸಿದ ದೀರ್ಘ ಹಾಗೂ ಧೀಮಂತ ಹೋರಾಟಗಳ ಒಂದು ಅವಲೋಕನವನ್ನು ಇಲ್ಲಿ ಮಾಡಲಾಗಿದೆ.

ರಾಜ್ಯವ್ಯಾಪೀ ಬಂದ್‌ಗಳು

ಕಳೆದ ಒಂದು ವರ್ಷದಲ್ಲಿ ಹಲವು ರಾಜ್ಯವ್ಯಾಪೀ ಬಂದ್‌ಗಳು ಯಶಸ್ವಿಯಾಗಿ ನಡೆದವು. ಕಾಂಗ್ರೆಸ್(ಐ) ಹಿಂಬಾಲಕ ಸಂಘಗಳನ್ನು ಬಿಟ್ಟು ಉಳಿದಂತೆ ಸುಮಾರು ಎಲ್ಲಾ ಕಾರ್ಮಿಕ ಸಂಘಟನೆಗಳು ಇವುಗಳಲ್ಲಿ ಉತ್ಸಾಹದಿಂದ ಭಾಗವಹಿಸಿದವು. ಅಕ್ಟೋಬರ್ 15ರಂದು ಮಹಾರಾಷ್ಟ್ರದಲ್ಲಿ ನಡೆದ ಇಂತಹ ಬಂದ್‌ನಲ್ಲಿ ಸುಮಾರು ನಲ್ವತ್ತು ಲಕ್ಷ ಕಾರ್ಮಿಕರು ಹಾಗೂ ನೌಕರರು ಭಾಗವಹಿಸಿದರು. ನವೆಂಬರ್ 27ರಂದು ಪ. ಬಂಗಾಲದ ಎಡರಂಗ ಹಾಗೂ ಪ್ರ[illegible] ಕಾರ್ಮಿಕ ಸಂಘಟನೆಗಳ ಕರೆ ಮೇರೆಗೆ ಸಂಪೂರ್ಣ ಬಂದ್ ಆಚರಿಸಿ ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯನ್ನು ರದ್ದು[illegible]ವು ಹಾಗೂ 'ಕೂಲಿಗಾಗಿ ಕಾಳು ಯೋಜನೆಗೆ ಆಹಾರ ಧಾನ್ಯ[illegible]ಕೆ ನಡೆಸಲು ಆಗ್ರಹಿಸಲಾಯಿತು. [illegible]ಗೂ ಪ. ಬಂಗಾಳದಲ್ಲಿ ಉಪಚುನಾವಣೆಯನ್ನು ಮುಂದೂಡಿದ್ದನ್ನು ಪ್ರತಿಭಟಿಸಲಾಯಿತು. ಅದೇ ದಿನ ಬಿಹಾರಿನಲ್ಲೂ ಬೆಲೆಯೇರಿಕೆ, ಎನ್.ಎಸ್.ಎ. ಇತ್ಯಾದಿಗಳ ವಿರುದ್ಧ ರಾಜ್ಯ ಬಂದ್ ಆಚರಿಸಲ್ಪಟ್ಟಿತ್ತು.

ಅಗತ್ಯ ಸೇವಾ ನಿರ್ವಹಣಾ ಸುಗ್ರೀವಾಜ್ಞೆ ಹಾಗೂ ಬೆಲೆಯೇರಿಕೆಯ ವಿರುದ್ಧ ರಾಜ್ಯವ್ಯಾಪೀ ಸಾರ್ವತ್ರಿಕ ಮುಷ್ಕರ ಕೇರಳದಲ್ಲಿ ಸೆಪ್ಟೆಂಬರ್ 3ರಂದು, ಪ. ಬಂಗಾಳದಲ್ಲಿ ಸೆಪ್ಟೆಂಬರ್ 14ರಂದು ನಡೆಯಿತು. ದಿಲ್ಲಿಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಘಟಕಗಳು, ಎಲ್. ಐ. ಸಿ., ಜಿ. ಐ. ಸಿ., ಬ್ಯಾಂಕ್ ಹಾಗೂ ಕೈಗಾರಿಕೆಗಳಲ್ಲಿನ ಸಂಘಗಳ ಸುಮಾರು 2000 ಪ್ರತಿನಿಧಿಗಳ ಸಮಾವೇಶ ನಡೆದು ದಿಲ್ಲಿಯಲ್ಲಿ [illegible] ದಿನದ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿತು. ಅದರಂತೆ ಏಪ್ರಿಲ್ 14ರಂದು ಸಂಪೂರ್ಣ ದಿಲ್ಲೀ ಕೈಗಾರಿಕಾ ವಲಯ ಸ್ತಬ್ಧಗೊಂಡಿತ್ತು. ಕನಿಷ್ಠ ವೇತನ, ಕಾಂಟ್ರಾಕ್ಟ್ ಲೇಬರ್ ಪದ್ಧತಿಯ ರದ್ದತಿ ಇತ್ಯಾದಿ ಈ ಹರತಾಳದ ಬೇಡಿಕೆಗಳು. ಈ ಬೇಡಿಕೆಗಳೂ ಅಲ್ಲದೆ ಹರಿಯಾಣದಲ್ಲಿ ಕಾರ್ಮಿಕರ ವಿರುದ್ಧ ಪೋಲೀಸರ ದಬ್ಬಾಳಿಕೆ, ಮಾಲಕರ ಪರವಾಗಿ ಹರಿಯಾಣಾ ಸರಕಾರದ ಮಧ್ಯಪ್ರವೇಶ ಇವನ್ನು ವಿರೋಧಿಸಿ ಹರಿಯಾಣದ ಕಾರ್ಮಿಕ ವರ್ಗ ಒಂದು ಸಂಯುಕ್ತ ಮುಷ್ಕರವನ್ನು ಮೇ 20ರಂದು ಯಶಸ್ವಿಯಾಗಿ ನಡೆಸಿತು.

ಸಾರ್ವಜನಿಕ ವಲಯದ ಕೈಗಾರಿಕೆಗಳಲ್ಲಿ

ಸರಕಾರದ ವೇತನ ಕಡಿತ ಹಾಗೂ ಕಾರ್ಮಿಕವಿರೋಧಿ ಧೋರಣೆಗಳ ವಿರುದ್ಧ ವ್ಯಕ್ತಪಟ್ಟ ಇನ್ನೊಂದು ಬೃಹತ್ ಪ್ರತಿಭಟನೆಯೆಂದರೆ ಸಾರ್ವಜನಿಕ ಕ್ಷೇತ್ರದ ಎಲ್ಲಾ ಕೈಗಾರಿಕೆಗಳಲ್ಲಿ ಮಾರ್ಚ್ 11ರಂದು ನಡೆದ ಮುಷ್ಕರ. ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಖಾನೆಗಳಲ್ಲಿ ಕಾರ್ಮಿಕರು ನಡೆಸಿದ 80 ದಿನಗಳ ದೀರ್ಘ ಹೋರಾಟ ಇತ್ತೀಚಿನ ಪ್ರಮುಖ ದೇಶವ್ಯಾಪೀ ಹೋರಾಟಗಳಲ್ಲಿ ಮುಖ್ಯವಾದದ್ದು. ಸರಕಾರದ ಕಾರ್ಮಿಕವಿರೋಧೀ ಘರ್ಷಣೆಯ ನೀತಿ ಇಲ್ಲಿ ಸಂಪೂರ್ಣ ಬಯಲಾಯ್ತು. ಕಾರ್ಮಿಕರ ಬೇಡಿಕೆಗಳು ನ್ಯಾಯಪೂರ್ಣವಾಗಿದ್ದರೂ, 160 ಕೋಟಿ ರೂಗಳಿಗಿಂತಲೂ ಹೆಚ್ಚು ನಷ್ಟವಾದರೂ ಅದನ್ನು ಲೆಕ್ಕಿಸದೆ ಪೋಲೀಸ್ ದಬ್ಬಾಳಿಕೆ ಮೂಲಕ ಮುಷ್ಕರವನ್ನು ಬಗ್ಗುಬಡಿಯಲು ಕೇಂದ್ರ ಸರಕಾರ ನಡೆಸಿದ ಪ್ರಯತ್ನ ಈ ಸರಕಾರದ ಬಗ್ಗೆ ಅಲ್ಪಸ್ವಲ್ಪ ಭ್ರಮೆಯಿಟ್ಟುಕೊಂಡ ಜನರ ನಂಬಿಕೆಯನ್ನೂ ಅದು ಕಳೆದುಕೊಳ್ಳುವಂತಾಯಿತು. ಒಗ್ಗಟ್ಟಿನಿಂದ ಸರಕಾರದ ದಬ್ಬಾಳಿಕೆಯನ್ನು ತಮ್ಮ ಮೂವರು ಸಂಗಾತಿಗಳ ಬಲಿದಾನವಾದರೂ ಹೆದರದೆ ಕಾರ್ಮಿಕರು ಎದುರಿಸಿದರು. ಹೈದರಾಬಾದ್ ಹಾಗೂ ಕಲವು ಸೇರಿಯ ಘಟಕಗಳ ಕಾರ್ಮಿಕರು ತಮ್ಮ ಬೆಂಗಳೂರಿನ ಸಂಗಾತಿಗಳ ಬೆಂಬಲಕ್ಕೆ ನಿಂತರು.

ಖಾಸಗೀ ವಲಯದಲ್ಲಿ ಸುದೀರ್ಘ ಹೋರಾಟಗಳು

ಕೇಂದ್ರ ಸರಕಾರ ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳ ಕಾರ್ಮಿಕರ ಮುಷ್ಕರವನ್ನು ಬಗ್ಗುಬಡಿದು ಈ ದೇಶದ ಎಲ್ಲಾ ವಲಯಗಳ ಕಾರ್ಮಿಕರು ಹಾಗೂ ನೌಕರರಲ್ಲಿ ಭಯ ಹುಟ್ಟಿಸಬಹುದೆಂದು ಲೆಕ್ಕಾಚಾರ ಹಾಕಿತ್ತು. ಆದರೆ ಅದನ್ನು ಖಾಸಗೀ ವಲಯದಲ್ಲಿ ಅನಂತರ ನಡೆದ ಹಲವು ಸುದೀರ್ಘ ಹೋರಾಟಗಳು ತಲೆಕೆಳಗು ಮಾಡಿವೆ.

ಬೆಂಗಳೂರಿನ "ವ್ಯಾಕೋ ಕಾರ್ಮಿಕರು" ತಮ್ಮ ಮಾಲಕರ ವಿರುದ್ಧ ಹಾಗೂ ಆ ಮಾಲಕರ ಬಾಲಬಡುಕ ಕಾಂಗ್ರೆಸ್ (ಐ) ಎಂ. ಪಿ. ಎಫ್. ಎಂ. ಖಾನರ ಗೂಂಡಾ ಪಡೆಗಳ ವಿರುದ್ಧ ನಡೆಸಿರುವ ಧೀರ ಹೋರಾಟದ ಬಗ್ಗೆ ಕರ್ನಾಟಕದ ಕಾರ್ಮಿಕ ವರ್ಗಕ್ಕೆ ಪ್ರತ್ಯೇಕವಾಗಿ ವಿವರಿಸುವ ಅವಶ್ಯಕತೆಯಿಲ್ಲ. ಕಾನಪುರದ "ಜೆ. ಕೆ. ರೇಯಾನ್ ಕಾರ್ಮಿಕರೂ" ಇಂತಹದೇ ಹೋರಾಟವನ್ನು ತಮ್ಮ ಮಾಲೀಕರ ಹಾಗೂ ಅವರ ಚಮಚಾ ಇಂಟಕ್ ಯೂನಿಯನ್‌ನ ವಿಶ್ವಾಸಘಾತಕ ನೀತಿಯ ವಿರುದ್ಧ ಆರು ತಿಂಗಳ ಕಾಲ ನಡೆಸಿದರು.

ಆಡಳಿತವರ್ಗ ತಾನು ಒಪ್ಪಿಕೊಂಡದ್ದನ್ನು ಜಾರಿಗೊಳಿಸಲು ನಿರಾಕರಿಸಿ ತನ್ನ ಬಂಟ ಇಂಟಕ್ ಯೂನಿಯನ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದನ್ನು ಉತ್ತರ ಪ್ರದೇಶದ ಕಾನಪುರದ "ರಜಾ ಟೆಕ್ಸ್‌ಟೈಲ್ಸ್‌ನ ಕಾರ್ಮಿಕರು" ವಿರೋಧಿಸಿ ಐದು ತಿಂಗಳ ದೀರ್ಘ ಹೋರಾಟ ನಡೆಸಿ ಮಾಲೀಕ ವರ್ಗದಿಂದ ಕೆಲವು ರಿಯಾಯಿತಿಗಳನ್ನು ಕಸಿದುಕೊಳ್ಳುವುದರಲ್ಲಿ ಯಶಸ್ವಿಯಾದರು.

ಕಾಂಟ್ರಾಕ್ಟ್ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂಬ ಬೇಡಿಕೆಯ ಮೇಲೆ ಫೆಬ್ರವರಿ 12ರಂದು ಜಮ್‌ಶೇಡ್‌ಪುರದಲ್ಲಿನ "ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿಯ 10,000 ಕಾರ್ಮಿಕರು" ಸಿ. ಐ. ಟಿ. ಯು. ಹಾಗೂ ಎ.ಐ.ಟಿ.ಯು.ಸಿ. ಯೂನಿಯನ್‌ಗಳ ಕರೆಯ ಮೇರೆಗೆ ಒಂದು ದಿನದ ಮುಷ್ಕರ ನಡೆಸಿದರು. ಮಾಲಕ ವರ್ಗ ಹಾಗೂ ಸರಕಾರ ಇದನ್ನು ಮುರಿಯಲು ಎಲ್ಲಾ ಮಾರ್ಗ ಬಳಸಿದವು. ಸಂಪೂರ್ಣ ಜಮಶೇಡ್‌ಪುರ ಪಟ್ಟಣವನ್ನೇ ಪೋಲೀಸ್ ಕ್ಯಾಂಪ್ ಆಗಿ ಪರಿವರ್ತಿಸಿತು. ಇಂಟಕ್ ಯೂನಿಯನ್ ಯಥಾಪ್ರಕಾರ ತನ್ನ ವಿಶ್ವಾಸಘಾತುಕ ವರ್ತನೆ ಪ್ರದರ್ಶಿಸಿ ಮುಷ್ಕರವನ್ನು ವಿಫಲಗೊಳಿಸಲು ಯತ್ನಿಸಿ ವಿಫಲವಾಯ್ತು. ಇಂತಹುದೇ ಬೇಡಿಕೆಯ ಮೇಲೆ ಮಧ್ಯಪ್ರದೇಶದ ಭಿಲಾಯಿಯಲ್ಲಿನ "ಸಿಂಪ್ಲೆಕ್ಸ್" ಕಾರ್ಮಿಕರು ದೃಢವಾದ ಹಾಗೂ ದೀರ್ಘವಾದ ಹೋರಾಟ ನಡೆಸಿದರು. ಸಿಂಪ್ಲೆಕ್ಸ್ ಆಡಳಿತ ಸುಮಾರಾಗಿ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುತ್ತಿದ್ದರೂ ಸರಕಾರ ಈ ಬಗ್ಗೆ ಬೇಕೆಂದೇ ಕಣ್ಣುಮುಚ್ಚಿ ಕುಳಿತಿತ್ತು. ಕಾರ್ಮಿಕರು ತಮ್ಮ ಹೋರಾಟಗಳ ಮೂಲಕ ಈ ಕಡೆ ಗಮನ ಸೆಳೆದಾಗ ಮಾಲಕರ ಗೂಂಡಾಗಳಿಗೆ ಬೆಂಬಲವಾಗಿ ತನ್ನ ಪೋಲೀಸರನ್ನು ಕಳಿಸಿ ಕಾರ್ಮಿಕರ ದೃಢತೆಯನ್ನು ಮುರಿಯಲು ಶತಪ್ರಯತ್ನ ಪಟ್ಟರೂ ಸಫಲವಾಗಲಿಲ್ಲ.

ಉತ್ತರ ಪ್ರದೇಶದ ಮೋದೀ ನಗರದ ಮೋದಿಗಳು ಹಾಗೂ ಉ. ಪ್ರ. ಸರಕಾರದ ಪೋಲೀಸರ ಗೂಂಡಾ ವರ್ತನೆಗಳ ವಿರುದ್ಧ ಅಲ್ಲಿಯ ಕಾರ್ಮಿಕರದ್ದು ಒಂದು ಸುದೀರ್ಘವಾದ ಹೋರಾಟ. ಜೂನ್ 29ರಂದು ಮಾಲೀಕರ ಬಾಡಿಗೆ ಗೂಂಡಾಗಳು ಎಚ್. ಎಂ. ಎಸ್. ನಾಯಕ ಜಯಪ್ರಕಾಶರನ್ನೂ ಅಮಾನುಷವಾಗಿ ಕೊಂದರು. ಆದರೂ ಹೆದರದೆ ಕಾರ್ಮಿಕರು ಧೈರ್ಯದಿಂದ ಪೋಲೀಸ್ ದಬ್ಬಾಳಿಕೆಯನ್ನು ಪ್ರತಿಭಟಿಸಿದರು.

ಲೋಕೋ, ಎಲ್. ಐ. ಸಿ. ಮುಷ್ಕರ

ಉತ್ತರ ಪ್ರದೇಶದ ಮೋದಿಗಳು ಹಾಗೂ ರಜಾ ಟೆಕ್ಸ್‌ಟೈಲ್ ಮಾಲೀಕರು ಮೊದಲೇ ಒಪ್ಪಿದ್ದನ್ನು ಕೊಡಲು ನಿರಾಕರಿಸಿದಾಗ ಸರಕಾರ ಅವರನ್ನು ಬೆಂಬಲಿಸಿತ್ತು. ಇತ್ತೀಚೆಗೆ ನಡೆದ ಎರಡು ಪ್ರಮುಖ ಮುಷ್ಕರಗಳು ಸ್ವತಃ ಕೇಂದ್ರ ಸರಕಾರವೇ ಇಂತಹ ಒಪ್ಪಂದಗಳನ್ನು ಮುರಿದಿದ್ದರಿಂದ ನಡೆದವು. ಲೋಕೋ ಸಿಬ್ಬಂದಿ ತಮ್ಮೊಡನೆ ಮಾಡಿಕೊಂಡ ಒಪ್ಪಂದವನ್ನು ಪಾಲಿಸಬೇಕೆಂಬ ಹಾಗೂ ಕಾರ್ಮಿಕ ವಿರೋಧೀ ನಿಲುವನ್ನು ಬಿಡಬೇಕೆಂಬ ಬೇಡಿಕೆಗಳಿಗಾಗಿ ಜನವರಿ ಹಾಗೂ ಫೆಬ್ರುವರಿ ತಿಂಗಳಲ್ಲಿ ಸತತ ಹೋರಾಟ ನಡೆಸಿದರು. ರಾಷ್ಟ್ರೀಯ ಭದ್ರತಾ ಶಾಸನದ ಪ್ರಕಾರ ಸಾಮೂಹಿಕ ಬಂಧನ, ಲಾಠೀಪ್ರಹಾರ, ಕೆಲಸದಿಂದ ವಜಾ, ಕಾರ್ಮಿಕರ ಹಾಗೂ ಅವರ ಮನೆಗಳ ಮೇಲೆ ದಾಳಿ ಇತ್ಯಾದಿ ಅಡೆತಡೆಯಿಲ್ಲದೆ ನಡೆದವು. ಮುಷ್ಕರನಿರತ ಕಾರ್ಮಿಕರ ಕುಟುಂಬದ ಸದಸ್ಯರನ್ನೂ ಬಂಧಿಸಲು ಸರಕಾರ ಹೇಸಲಿಲ್ಲ!

ದೇಶದ ಸರ್ವೋಚ್ಚ ನ್ಯಾಯಾಲಯ ನೌಕರರೊಂದಿಗೆ ಎಲ್.ಐ.ಸಿ. ಆಡಳಿತವರ್ಗ ಮಾಡಿಕೊಂಡ ಒಪ್ಪಂದವನ್ನು ಜಾರಿಗೊಳಿಸಬೇಕೆಂದು ಸ್ಪಷ್ಟ ನಿರ್ದೇಶವಿತ್ತಿದ್ದರೂ ಸರಕಾರದ ಆದೇಶದ ಪ್ರಕಾರ ಅದನ್ನು ಆಡಳಿತವರ್ಗ ಮಾನ್ಯ ಮಾಡಲಿಲ್ಲ. ಇದರ ವಿರುದ್ಧ ಎಲ್. ಐ. ಸಿ. ನೌಕರರು ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಹಾಗೂ ಏಪ್ರಿಲ್ ತಿಂಗಳಲ್ಲಿ 15 ದಿನ ಸತತ ಮುಷ್ಕರ ನಡೆಸಿ ಕೊನೆಗೂ ಸರಕಾರ ಹಾಗೂ ಆಡಳಿತವರ್ಗ ನ್ಯಾಯಾಲಯದ ನಿರ್ದೇಶ ಪಾಲಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

ಇದೇರೀತಿ ಐ. ಟಿ. ಸಿ. ಕಾರ್ಮಿಕರು ಹಾಗೂ ಕುದುರೆಮುಖ ಎಚ್. ಎಸ್. ಸಿ. ಎಲ್.ನ ಕಾರ್ಮಿಕರು

(7ನೇ ಪುಟ ನೋಡಿ)

ನವೆಂಬರ್ ೨೩ರ ಕಾರ್ಮಿಕ ಮತಪ್ರದರ್ಶನದಲ್ಲಿ ಅಂಗೀಕರಿಸಿದ ಠರಾವಿನ ಪೂರ್ಣಪಾಠ

1. ದೇಶದಾದ್ಯಂತದಿಂದ ಬಂದ ಕಾರ್ಮಿಕರ ಈ ಚಾರಿತ್ರಿಕ ಹಾಗೂ ಸಂಯುಕ್ತ ಮತಪ್ರದರ್ಶನವನ್ನು ಮುಂಬೈಯಲ್ಲಿ ಜೂನ್ 4, 1981 ರಂದು ಜರುಗಿದ ಕೇಂದ್ರ ಕಾರ್ಮಿಕ ಸಂಘಗಳು ಹಾಗೂ ಕೈಗಾರಿಕಾ ಮಹಾಸಂಘಗಳ ರಾಷ್ಟ್ರೀಯ ಸಮಾವೇಶ ಕೈಗೊಂಡ ನಿರ್ಧಾರಗಳಿಗನುಗುಣವಾಗಿ ರಾಷ್ಟ್ರೀಯ ಆಂದೋಲನ ಸಮಿತಿ ಏರ್ಪಡಿಸಿದೆ.

2. ದೇಶದ ಮೂಲೆಮೂಲೆಗಳಿಂದ ನಾವು ಕೇಂದ್ರಸರಕಾರದ ಧೋರಣೆಗಳ ಬಗ್ಗೆ ನಮ್ಮ ಖಂಡನೆಯನ್ನು ದಾಖಲುಗೊಳಿಸಲು ಬಂದಿದ್ದೇವೆ. ಕೇಂದ್ರಸರಕಾರದ ಈ ಧೋರಣೆಗಳು i) ನಾಗಾಲೋಟದಿಂದ ಓಡುತ್ತಿರುವ ಜೀವನಾವಶ್ಯಕ ಸಾಮಗ್ರಿಗಳ ವಿಪರೀತ ಬೆಲೆಗಳ ಭಾರವನ್ನು ದಿನೇದಿನೇ ಇನ್ನಷ್ಟು ಹೆಚ್ಚಿಸಿ ಬೆವರುಸುರಿಸಿ ದುಡಿವ ಜನತೆಯ ಜೀವನವನ್ನು ದುರ್ಭರಗೊಳಿಸುತ್ತಿವೆ ಮತ್ತು ii) ದಶಕಗಳ ಕಾಲ ತೀವ್ರ ಹೋರಾಟ ನಡೆಸಿ, ವಿಶೋಚಿತ ತ್ಯಾಗ, ಬಲಿದಾನಗಳ ನಂತರ ಗಳಿಸಿಕೊಂಡ ಕಾರ್ಮಿಕರ ವೇತನ, ಇತರ ಸೌಲಭ್ಯಗಳು, ಜೀವನಮಟ್ಟ, ಸಂಘಟನೆಯ ಹಕ್ಕುಗಳು ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹಲ್ಲೆ ನಡೆಸುತ್ತಿವೆ.

3. ಮುಂಬೈ ಸಮಾವೇಶದ ನಂತರ ಸರಕಾರದ ಪ್ರಜಾಪ್ರಭುತ್ವ-ವಿರೋಧೀ, ಕಾರ್ಮಿಕ-ವಿರೋಧೀ ಹಾಗೂ ಶೋಷಕ ಪರವಾದ ಧೋರಣೆಗಳು ಅವಶ್ಯಕ ಸೇವಾ ನಿರ್ವಹಣಾ ಶಾಸನವೆಂಬ ಕಾರ್ಮಿಕರ ಮೂಲಭೂತವಾದ ಮುಷ್ಕರದ ಹಕ್ಕನ್ನು ನಾಶಗೊಳಿಸಲು ಜಾರಿಗೊಳಿಸಿದ ಕರಾಳ ಕ್ರಮದೊಂದಿಗೆ ಮತ್ತಷ್ಟು ತೀವ್ರಗೊಂಡಿವೆ. ಈ ದಮನಕಾರೀ ಶಾಸನಕ್ಕೂ ಇತ್ತೀಚೆಗೆ ಅಂತರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ ಒಪ್ಪಂದ ಮಾಡಿಕೊಂಡ 5000 ಕೋಟಿ ರೂ.ಗಳ ಸಾಲದ ಶರತ್ತುಗಳಿಗೂ ಸಂಬಂಧವಿದೆಯೆಂಬ ಆಪಾದನೆಯನ್ನು ಸರಕಾರ ಇನ್ನೂ ಅಲ್ಲಗಳೆದಿಲ್ಲ.

4. ಗುತ್ತೇದಾರಿಗಳು, ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಇತರ ಸಮಾಜ ವಿರೋಧೀ ಶಕ್ತಿಗಳಿಗೆ ನೀಡುತ್ತಿರುವ ಭಾರೀ ಪ್ರಮಾಣದ ರಿಯಾಯಿತಿಗಳಿಂದಾಗಿ ಬಿಕ್ಕಟ್ಟು ದಿನೇದಿನೇ ತೀವ್ರವಾಗುತ್ತಿದೆ. ಪರಿಣಾಮವಾಗಿ ಆರ್ಥಿಕ ಶಕ್ತಿ ಹಾಗೂ ಸಂಪತ್ತಿನ ಕೇಂದ್ರೀಕರಣ ಮತ್ತಷ್ಟು ಹೆಚ್ಚುತ್ತಿದೆ. ಆದ್ದರಿಂದ ಸತತವಾಗಿ ಹೆಚ್ಚುತ್ತಿರುವ ಬೆಲೆಏರಿಕೆ ಹಾಗೂ ಸರಕಾರದ ಕಾರ್ಮಿಕವಿರೋಧೀ, ಪ್ರಜಾಪ್ರಭುತ್ವ ವಿರೋಧೀ ಧೋರಣೆಗಳ ವಿರುದ್ಧ ದೇಶವ್ಯಾಪೀ ಸಂಯುಕ್ತ ಆಂದೋಲನವನ್ನು ಕಾರ್ಮಿಕವರ್ಗ ಮುಂದುವರಿಸಿಕೊಂಡು ಹೋಗಬೇಕಾದದ್ದು ಮಹತ್ವದ ಕೆಲಸ.

5. ಕೇಂದ್ರ ಸರ್ಕಾರವನ್ನು ನಾವು ಈ ಕೆಳಗಿನ ತುರ್ತುಕ್ರಮಗಳನ್ನು ಹಾಗೂ ಧೋರಣೆಗಳನ್ನು ಬಹುಸಂಖ್ಯಾತ ಜನತೆಯ ಹಿತದೃಷ್ಟಿಯಿಂದ ಅಂಗೀಕರಿಸಬೇಕೆಂದು ಒತ್ತಾಯಿಸುತ್ತೇವೆ.

* ಆಹಾರಧಾನ್ಯಗಳು, ಖಾದ್ಯ ತೈಲ, ಬಟ್ಟೆ, ಸಕ್ಕರೆ ಇತ್ಯಾದಿ ಎಲ್ಲಾ ಅವಶ್ಯಕ ಸಾಮಗ್ರಿಗಳನ್ನು ಕಮ್ಮಿ ಬೆಲೆಯಲ್ಲಿ ಒಂದು ಸಮಗ್ರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜನತಾ ಸಮಿತಿಗಳ ಹತೋಟಿ ಹಾಗೂ ಮೇಲ್ವಿಚಾರಣೆಯಲ್ಲಿ ಮಾರಾಟ ಮಾಡಲು ವ್ಯವಸ್ಥೆಮಾಡಿ ಅವಶ್ಯಕ ಸಾಮಗ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಹಾಗೂ ಅಡೆತಡೆಯಿಲ್ಲದೆ ಸಿಗುವಂತೆ ಮಾಡಬೇಕು.

* ರೈತರಿಗೆ ಯೋಗ್ಯಬೆಲೆ ಸಿಗಬೇಕು ಹಾಗೂ ಕೃಷಿ ಸಾಮಗ್ರಿಗಳು ಅಡೆತಡೆಯಿಲ್ಲದೆ ಸಿಗುವಂತಾಗಬೇಕು.

* ಕೃಷಿಕಾರ್ಮಿಕರಿಗೆ ಕನಿಷ್ಟ ಜೀವನಾವಶ್ಯಕ ಕೂಲಿ ಹಾಗೂ ಕೆಲಸದ ಭದ್ರತೆ ನೀಡಲು ಶಾಸನವನ್ನು ರೂಪಿಸಿ ಜಾರಿಗೊಳಿಸಬೇಕು.

* ಕಾಳಸಂತೆಕೋರರು, ಕಳ್ಳದಾಸ್ತಾನುಗಾರರು, ಕಳ್ಳಸಾಗಾಣಿಕೆದಾರರು, ಸಟ್ಟಾ ವ್ಯಾಪಾರಿಗಳು ಹಾಗೂ ಅವರನ್ನು ರಕ್ಷಿಸುವ ಅಧಿಕಾರಿಗಳ ವಿರುದ್ಧ ಬಿಗಿಕ್ರಮ ಕೈಗೊಳ್ಳಬೇಕು.

* ರಾಷ್ಟ್ರೀಯ ಭದ್ರತಾ ಶಾಸನ, 1980 ಹಾಗೂ ಅವಶ್ಯಕ ಸೇವಾ ನಿರ್ವಹಣಾ ಶಾಸನ, 1981 ಇವೆರಡನ್ನು ರದ್ದುಗೊಳಿಸಬೇಕು.

* 15ನೇ ಭಾರತೀಯ ಸಮ್ಮೇಳನ ಹಾಕಿಕೊಟ್ಟ ನೀತಿಗಳಿಗನುಗುಣವಾಗಿ ಕಾರ್ಮಿಕವರ್ಗಕ್ಕೆ ಅವಶ್ಯಕತೆ-ಆಧಾರಿತ ಕನಿಷ್ಟ ಸಂಬಳ ದೊರೆಯಬೇಕು.

* ಜೀವನವೆಚ್ಚ ಏರಿಕೆಯನ್ನು ಸಂಪೂರ್ಣವಾಗಿ ತುಂಬಿಸಿಕೊಡಬೇಕು ಹಾಗೂ ಜೀವನವೆಚ್ಚ ಸೂಚ್ಯಂಕ (1960 ಆಧಾರವರ್ಷ)ದ ಪ್ರತೀ ಒಂದು ಪಾಯಿಂಟ್ ಏರಿಕೆಗೆ ರೂ. 1.30 ಗರಿಷ್ಠ ಮಿತಿ ಎಂದರೆ ಸಾರ್ವಜನಿಕ ಉದ್ದಿಮೆಗಳ ಬ್ಯೂರೋ ತನ್ನ ಮನಬಂದಂತೆ ಹೇರಿದ ಮಿತಿಯನ್ನು ರದ್ದುಗೊಳಿಸಬೇಕು.

* ಬೋನಸ್ ಪಾವತಿ ಶಾಸನವನ್ನು ತಿದ್ದುಪಡಿಗೊಳಿಸಿ ಎಲ್ಲಾ ಕಾರ್ಮಿಕರಿಗೆ ಗರಿಷ್ಠ ಮಿತಿ ಹಾಗೂ ಪೂರ್ವಶರತ್ತುಗಳಿಲ್ಲದೆ ಬೋನಸ್ ನೀಡಬೇಕು.

* ಕೆಲಸದಿಂದ ವಜಾಮಾಡುವುದು, ಉದ್ದಿಮೆಗಳನ್ನು ಮುಚ್ಚುವುದು ಇವುಗಳ ಮೇಲೆ ನಿರ್ಬಂಧ ಹೇರಬೇಕು, ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಆರಂಭಿಸಬೇಕು.

* ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಕೈಗೊಂಡಿರುವ ಎಲ್ಲಾ ಕ್ರಮಗಳನ್ನು ವಾಪಸ್ಸು ಪಡೆಯಬೇಕು.

* ಹೊಸದ ಜೀವನವೆಚ್ಚ ಸೂಚ್ಯಂಕವನ್ನು ಸರಿಪಡಿಸಬೇಕು.

* ಗುಪ್ತಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಬೇಕು.

* ಸಾಮೂಹಿಕ ಚೌಕಾಸಿ ಹಾಗೂ ಟ್ರೇಡ್‌ಯೂನಿಯನ್ ಹಕ್ಕುಗಳ ಬಗ್ಗೆ ಸಂಪೂರ್ಣ ಭರವಸೆ ಕೊಡಬೇಕು.

6. ಕಾರ್ಮಿಕವರ್ಗದ ಈ ದೀರ್ಘಕಾಲೀನ ಬೇಡಿಕೆಗಳು ಹಾಗೂ ಜನತೆಯ ತುರ್ತು ಅಗತ್ಯಗಳ ಕಡೆಗೆ ಗಮನಕೊಡದೆ ನಿರಾಕರಿಸುವ ಸರಕಾರವನ್ನು ನಾವು ಖಂಡಿಸುತ್ತೇವೆ. ಸರಕಾರ ಕಾರ್ಮಿಕವರ್ಗದ ಸಹಕಾರ ಕೋರುವ ಬದಲು ಅದರೊಡನೆ ತಿಕ್ಕಾಟಕ್ಕಿಳಿವ ಧೋರಣೆ ಅಂಗೀಕರಿಸಿದೆ.

ಇಂತಹ ಸ್ಥಿತಿಯಲ್ಲಿ, ಹಣದುಬ್ಬರ, ಬೆಲೆಏರಿಕೆ ಹಾಗೂ ಟ್ರೇಡ್‌ಯೂನಿಯನ್ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಎಲ್ಲ ದಿಕ್ಕುಗಳಿಂದಲೂ ಪ್ರಹಾರ ನಡೆಸುತ್ತಿರುವ ಸರಕಾರದ ವಿನಾಶಕಾರೀ ಧೋರಣೆಗಳಿಗೆ ತಡೆಯೊಡ್ಡಿ ಅವನ್ನು ಬದಲಿಸುವಂತಾಗಬೇಕಾದರೆ ಹೆಚ್ಚು ಒಗ್ಗಟ್ಟಿನ, ಸತತ ಹಾಗೂ ಸತತ ಹೋರಾಟ ನಡೆಸಬೇಕಾಗಿದೆಯೆಂಬುದು ನಮ್ಮ ದೃಢ ಅಭಿಪ್ರಾಯ.

ಈ ಉದ್ದೇಶದಿಂದ, 1982ರ ಜನವರಿ 19ರಂದು ಕಾರ್ಮಿಕವರ್ಗ "ಒಂದು ದಿನದ ದೇಶವ್ಯಾಪೀ ಕೈಗಾರಿಕಾ ಸಾರ್ವತ್ರಿಕ ಮುಷ್ಕರ" ಇಡೀ ಭಾರತಾದ್ಯಂತ ಆಚರಿಸಬೇಕೆಂದು ನಾವು ನಿರ್ಧರಿಸುತ್ತೇವೆ. ಹಾಗೂ ಕಾರ್ಮಿಕರು ಮತ್ತು ನೌಕರರ ಎಲ್ಲಾ ವಿಭಾಗಗಳಲ್ಲಿ, ಖಾಸಗೀ ಹಾಗೂ ಸಾರ್ವಜನಿಕ ಈ ಎರಡೂ ವಲಯಗಳಲ್ಲಿನ ಎಲ್ಲಾ ಕಾರ್ಮಿಕಸಂಘಗಳಲ್ಲಿ ಇದನ್ನು ಶಾಂತಿಯುತವಾದ, ಸಂಯುಕ್ತ, ಶಿಸ್ತುಬದ್ಧ ಹಾಗೂ ಸಂಘಟಿತ ರೀತಿಯಲ್ಲಿ ಚರಿತ್ರಾರ್ಹವಾಗುವಂತೆ ಯಶಸ್ವೀಗೊಳಿಸಬೇಕೆಂದು ಮನವಿಮಾಡಿಕೊಳ್ಳುತ್ತೇವೆ.

ಅಲ್ಲದೆ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು, ಬೆವರು ಸುರಿಸುವ ರೈತರು, ಕೃಷಿಕಾರ್ಮಿಕರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು, ಬುದ್ಧಿಜೀವಿಗಳು ಹಾಗೂ ಇತರರಲ್ಲಿ ಈ ಹೋರಾಟಕ್ಕೆ ಬೆಂಬಲವಾಗಿ ಮುಂದೆ ಬರಬೇಕೆಂದು ಮನವಿಮಾಡಿಕೊಳ್ಳುತ್ತೇವೆ. ●

ರೇಲ್ವೆ ಸರಕು-ಸಾಗಾಣಿಕೆ ದರ ಏರಿಕೆ

ಡಿಸೆಂಬರ್ 7 ರಂದು ಲೋಕಸಭೆಯಲ್ಲಿ ಒಂದು ಹೇಳಿಕೆಯನ್ನು ನೀಡುವ ಮೂಲಕ ಸರಕಾರವು ರೇಲ್ವೆ ಸಾಗಾಣಿಕೆ ದರವನ್ನು ಏರಿಸಿದೆ. 500 ಕಿ.ಮೀ.ಗಿಂತ ಹೆಚ್ಚಿನ ದೂರಕ್ಕೆ ಶೇ. 10ರಷ್ಟು. 500 ಕಿ.ಮೀ.ಗಿಂತ ಹೆಚ್ಚಿನ ದೂರಕ್ಕೆ ಶೇ. 15ರಷ್ಟು ದರವನ್ನು ಏರಿಸಲಾಗಿದೆ. ಈ ಏರಿಕೆಯಿಂದ ಸರಕಾರದ ಬೊಕ್ಕಸಕ್ಕೆ 80 ಕೋಟಿ ನಿವ್ವಳ ವರಮಾನವನ್ನು ನಿರೀಕ್ಷಿಸಲಾಗಿದೆ. ಪೂರಕವಾದ ಆಯವ್ಯಯ ಪಟ್ಟಿಯನ್ನು ಮಂಡಿಸದೆ ದಿಢೀರನೆ ದರ ಏರಿಸಿದ ರೀತಿಯು ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಸರ್ವಾಧಿಕಾರಿ ಆಳುವ ಪಕ್ಷದ ಧೋರಣೆಯನ್ನು ಮತ್ತೊಮ್ಮೆ ಹೊರಗೆಡವಿದೆ.

ಅಕ್ಕಿ ಮತ್ತು ಗೋಧಿಯನ್ನು 500ಕಿ.ಮೀ. ದೂರ ಸಾಗಿಸುವ ದರವು 46ರೂ. 60 ಪೈಸೆಯಿಂದ 51ರೂ. 30ಪೈಸೆಗೆ ಮತ್ತು ದವಸ ಧಾನ್ಯಗಳಿಗೆ 49ರೂ. 60ಪೈಸೆಯಿಂದ 54ರೂ. 10ಪೈಸೆಗೆ ಏರಲಿದೆ. ಅಕ್ಕಿಯನ್ನು 1000 ಕಿ.ಮೀ. ದೂರಸಾಗಿಸಲು ಈಗಿದ್ದ ದರ 85ರೂ. 90ಪೈಸೆ. ಇದು 102ರೂ. 90ಪೈಸೆ ಆಗಲಿದೆ. ಮತ್ತು ದವಸಧಾನ್ಯಗಳಿಗೆ 94ರೂ. 80ಪೈಸೆಯಿಂದ 109ರೂ.ಗೆ ಹೆಚ್ಚಾಗಲಿದೆ. ಇದೇ ರೀತಿ ಕಲ್ಲಿದ್ದಲು, ಸಿಮೆಂಟ್, ಉಕ್ಕು, ಪೆಟ್ರೋಲಿಯಂ (ಸೀಮೆ ಹೊರತಾಗಿ) ಮೊದಲಾದ ಸ್ತುಗಳ ಸಾಗಾಣಿಕೆ ದರವನ್ನೂ ಏರಿಸಲಾಗಿದೆ.

ಲೋಕಸಭೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಮಂಡಿಸಲಾದ ದೈನಂದಿನ ರೇಲ್ವೆ ವ್ಯಯ ಪಟ್ಟಿಯಲ್ಲೂ ಸರಕಾರವು ಯಾಣಿಕ ದರವನ್ನು ರೂ. ನೂರು ಕೋಟಿ ನಿವ್ವಳ ಲಾಭ ಬರುವಲ್ಲಿ ಏರಿಸಿತು. ಈಗ ಮತ್ತೆ ಸಲಾಗಿರುವ ರೂ. 320 ಕೋಟಿ ಈಗಾಗಲೇ ಏರಿರುವ ಬೆಲೆಗಳ ಮೇಲೆ ತೀವ್ರ ಪರಿಣಾಮ ಬೀರಲಿ. ಇದರಿಂದ ಜನತೆಯು ಇನ್ನಷ್ಟು ಸಂಕಷ್ಟಕ್ಕೊಳಗಾಗಿದೆ. ನೌಕರರು ಮತ್ತು ಕಾರ್ಮಿಕರ ನಿಜ ವೇತನದರಿಂದ ಮತ್ತಷ್ಟು ಕೆಳ ತಳ್ಳಲ್ಪಟ್ಟಿದೆ. ತೀವ್ರ ಹೋರಾಟಗಳಿಂದ ವರ್ಗವು ಪಡೆದ ಅಲ್ಪಸ್ವಲ್ಪ ಸ್ವಗಳೂ ಕುಸಿಯಲಿವೆ.

ರೆಆಡಳಿತ ವರ್ಗದ ಅಸಾಮರ್ಥ್ಯ ತುಂಬಲು ಜನತೆಯ ಮೇಲೆ ತೀವ್ರವಾದ ಹೊರೆಯನ್ನು ಹೊಗಿದೆ. ಈ ಆಡಳಿತವರ್ಗದ ಕಾರ್ಮಿಕವಿರೋಧಿ ಧೋರಣೆಯು ಲೋಕೋಮೆನ್‌ಗಳ ಹೋರಾಟ ಮನನಿಮಾನುಷವಾಗಿ ದಮನಿಸಿ ದಾಖಲಾಯಿತು. ರೇಲ್ವೆ ಆಡಳಿತಕ್ಕೆ ಕಾರ್ಮಿಕರೊಂದಿಗೆ ಸಹಕರಿಸುವ ಆಸಕ್ತಿಯೂ ಇಲ್ಲ. ರೇಳಿತವರ್ಗದ ಅಸಾಮರ್ಥ್ಯದಿಂದಾಗಿ ಜನತೆಯು ನಿರಂತರವಾಗಿ ಏರುತ್ತಿರುವ ಪ್ರಯಾಣಿಕದರ ಮತ್ತು ಸರಕುಸಾಗಾಣಿಕೆ ದರಗಳಿಂದ ಕಷ್ಟ ಅನುಭವಿಸಬೇಕಾಗಿದೆ.

ಇಷ್ಟು ಮಾತ್ರವಲ್ಲ! ಈ ಸರಕು ಸಾಗಾಣಿಕೆ ದರದ ಏರಿಕೆಯು ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿರುವ ವಿಶ್ವ ಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವ ಧೋರಣೆಯ ಕಹಿಫಲವಾಗಿದೆ. ರೇಲ್ವೆ ಅಭಿವೃದ್ಧಿಗಾಗಿ ಪಡೆದುಕೊಂಡ 500ಕೋಟಿ ರೂ. ಸಾಲಕ್ಕೆ ಈ ಕೆಳಗಿನ ಶರತ್ತುಗಳನ್ನು ವಿಶ್ವ ಬ್ಯಾಂಕ್ ಹಾಕಿರುವುದನ್ನು ಲೋಕಸಭೆಯಲ್ಲೇ ಒಪ್ಪಿಕೊಳ್ಳಲಾಗಿದೆ.

1. ಸರಕು ಸಾಗಾಣಿಕೆ ದರದಲ್ಲಿ ವಾರ್ಷಿಕ ತಿದ್ದುಪಡಿ ಮತ್ತು ಪ್ರಯಾಣಿಕ ದರದ ಏರಿಕೆ. 2. ಅತ್ಯಂತ ದೊಡ್ಡ ಬಹುರಾಷ್ಟ್ರೀಯ ಸಂಸ್ಥೆಗಳಲ್ಲೊಂದಾದ ಐ.ಬಿ.ಎಮ್ (IBM) ಒದಗಿಸುವ ಸಲಕರಣೆಗಳಿಂದ ಯಾಂತ್ರೀಕರಣ ಮಾಡುವುದು 3. ರೇಲ್ವೆ ಮಂಡಳಿಗೆ ಆಡಳಿತ ಸಮಯ ಹೆಚ್ಚಿಸುವುದು.

ಈ ಷರತ್ತುಗಳು ಅನುಷ್ಠಾನಕ್ಕೆ ಬರುತ್ತಲಿವೆ. ತಮ್ಮನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಕ್ಕಿಸಲಿರುವ ಸರಕಾರದ ಕ್ರಮವನ್ನು ಜನತೆ ಒಗ್ಗಟ್ಟಿನಿಂದ ಪ್ರತಿಭಟಿಸುವುದು ಅತ್ಯವಶ್ಯ.

ಕರ್ನಾಟಕ ರಾಜ್ಯದಲ್ಲಿ

–ಎನ್ಕೆ

ತ್ಯಾಂಕ್ ಗಾಡ್ - ರೇಣುಕಾ ರಾಜೇಂದ್ರನ್

"ಸಂಕಟ ಬಂದಾಗ ವೆಂಕಟರಮಣ" ಎಂಬ ನಾಣ್ಣುಡಿ ನೀವೆಲ್ಲ ಕೇಳಿರಬೇಕು. ಇಂಥ ಗಾದೆ ಮಾತನ್ನು ನೀವು ಕೇಳಿಲ್ಲದಿದ್ದರೆ ನೀವು ವೆಂಕಟರಮಣನನ್ನು ನೆನೆಸುವ ಅವಕಾಶವನ್ನು ಸಂಕಟ ತಂದುಕೊಟ್ಟಿಲ್ಲೆಂದು ಭಾವಿಸಲೇ, ಹೇಗೆ! ನಾವು ಮಣ್ಣಾದರೂ ತಿಂದೇವು ಇಂದಿರಮ್ಮ ಅಧಿಕಾರದಲ್ಲಿರಲೆಂದು ಹೋದ ವರ್ಷ ಬಹಳ ಜನ ಹೇಳುತ್ತಿದ್ದರು. ಈಗ ಅವರ ಸಂಖ್ಯೆ ಕಡಿಮೆಯಾಗಿದೆ. ಇಂದಿರಾಗಾಂಧಿಯ ಹೆಸರಲ್ಲಿ ಮಣ್ಣು ತಿಂದೂತಿಂದೂ ಅಭಿರುಚಿ ಕಳೆದುಕೊಂಡ ಜನ ವಿರೋಧಿ ಪಕ್ಷಗಳತ್ತ ಮಾರ್ಗದರ್ಶನಕ್ಕಾಗಿ ನೋಡುತ್ತಿದೆಂಬ ವಿಷಯ ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಗಳ ಪರಿಣಾಮಗಳಿಂದ ತಿಳಿದುಬಂದಿದೆ.

ಜನರು ಇಂದಿರಾಗಾಂಧಿಯ ಹಿಡಿತದಿಂದ ವಿಮೋಚನೆಗೊಳ್ಳಲು ಹಾತೊರೆಯಲು ಪ್ರಾರಂಭಿಸಿರುವಾಗಲೇ ಮಾಜಿ ಸಚಿವೆ ರೇಣುಕಾ ರಾಜೇಂದ್ರನ್ ಅವರು ತಮ್ಮ ಮೇಲಿನ ವಂಚನೆ ಆರೋಪದಿಂದ ವಿಮುಕ್ತಿ ಪಡೆಯುತ್ತ "ತ್ಯಾಂಕ್ ಗಾಡ್" ಎಂಬ ಉದ್ಗಾರ ತೆಗೆದರು. ಈ ಮುಂಚೆ ಹಲವಾರು ದೇವರುಗಳಲ್ಲೊಬ್ಬನಿಗಾದರೂ ವಂದನೆ ಸಲ್ಲಿಸುವ ಚಟವಿತ್ತೋ ತಿಳಿದಿಲ್ಲ. ಆದರೆ ಇಡೀ ರಾಜ್ಯದ ಜನತೆ ಕುತೂಹಲ ಕೆರಳಿಸಿದ ಈ ಮೊಕದ್ದಮೆಯಲ್ಲಿ ನಿರಪರಾಧಿಯಾಗಿ ಹೊರಬಂದ ಕೂಡಲೇ ಈ ಉದ್ಗಾರ ರೇಣುಕಾ ರಾಜೇಂದ್ರನ್ ಅವರಿಂದ ಹೊರಬಿದ್ದಿರುವುದರಲ್ಲಿ ಅರ್ಥವಿದೆ. ಯಾಕೆಂದರೆ "ಸಿ.ಐ.ಡಿ. ಪೋಲೀಸರು ಯಾವ ಪೂರ್ವಗ್ರಹ ಪಕ್ಷಪಾತವಿಲ್ಲದೆ ತನಿಖೆ ನಡೆಸಿದ್ದಾರೆ. ಹಾಗೆಯೇ ಚಾರ್ಜ ಶೀಟ್ ಸಲ್ಲಿಸಿದ್ದಾರೆ. ಫಲಿತಾಂಶ ಏನೇ ಆದರೂ ಕೂಡ ಅವರು ಅಂದರೆ ಸಿ. ಐ. ಡಿ. ಪೋಲೀಸ್ ಅಧಿಕಾರಿಗಳು ಅಭಿನಂದನಾರ್ಹರು ಎಂದು ಮ್ಯಾಜಿಸ್ಟ್ರೇಟರೇ ಶ್ಲಾಘಿಸಿದ್ದಾರೆ. ಕರ್ಮಣ್ಯೇ ವಾಧಿ ಕಾರಸ್ತೆ ಮಾಫಲೇಶು ಕದಾಚನ" ಎಂದು ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಉಪದೇಶಿಸಿದ್ದಾನೆಂದು ಗೀತೆಯಲ್ಲಿ ಉಲ್ಲೇಖಿಸಿದಂತೆಯೇ ಶ್ರಮಪಟ್ಟು ತನಿಖೆ ನಡೆಸಿ ಚಾರ್ಜಶೀಟ್ ಹಾಕಿದ ಸಿ. ಐ. ಡಿ. ಪೋಲೀಸರ ಕಾರ್ಯ ಶ್ಲಾಘನೀಯವಾದರೂ, ತಮ್ಮ ನಿಷ್ಠೆಯ ಕೆಲಸಕ್ಕೆ ಮ್ಯಾಜಿಸ್ಟ್ರೇಟರು, ಏನೋ ಕಾರಣದಿಂದ ಫಲ ನೀಡದಿದ್ದರೂ ಕೂಡ ಗೀತಾ ವಾಚನ ಮಾಡಿ ಫಲದಾಸೆ ಬಿಡುವಾಗ ಮಾತ್ರ ಪೋಲೀಸರಿಗಲ್ಲದಿದ್ದರೂ ಸಾರ್ವಜನಿಕರಿಗೇನೋ ನಿರ್ಣಯದ ಕುರಿತು ಸಂಶಯು ಗಾಳಿ ಬೀಸಿ ಹೋಯಿತೆಂದು ಭಾವಿಸಿದರೆ ಆಧಾರವಿಲ್ಲದಿಲ್ಲವೆನ್ನಲೇ ?

"ಪ್ರಾಸಿಕ್ಯೂಶನ್ ಸುಳ್ಳು ಮೊಕದ್ದಮೆ ಹೂಡಿದೆ ಎನ್ನಲೂ ನಾನು ಸಿದ್ಧನಿಲ್ಲ. ಹಾಗೆಯೇ ಆರೋಪಿಗಳ ವಾದವೂ ತೃಪ್ತಿಕರವಾಗಿಲ್ಲ. ಬಹುಶ ಪೂರ್ಣ ಸತ್ಯ ಇವೆರಡರ ನಡುವೆ ಎಲ್ಲೋ ಇದೆ" ಎಂದು ನ್ಯಾಯಮೂರ್ತಿಗಳೇ ಹೇಳಿದ್ದರ ಅರ್ಥ ಜನರಿಗೆಲ್ಲ ಸ್ಪಷ್ಟವಾಗಿಯೇ ತಿಳಿಯುತ್ತದೆಂಬ ಸಂಶಯು ನಮಗಿಲ್ಲ. ಈ ಜಡ್ಜ್‌ಮೆಂಟಿನ ಒಳಅರ್ಥವೂ ಗೊತ್ತಾಗಲು ಕಷ್ಟವೇನಿಲ್ಲ. "ನನ್ನ ಸಿದ್ಧಾಂತಕ್ಕೆ ಒಪ್ಪುವ(ಕಮಿಟೆಡ್)ನ್ಯಾಯಾಂಗ ಮತ್ತು ನ್ಯಾಯಾಧೀಶರು ಬೇಕು" ಎಂದು ಇಂದಿರಾಗಾಂಧಿ ಹೇಳುತ್ತಲೇ ಇದ್ದಾರೆ. ಅಂಥ ಕಮಿಟೆಡ್ ನ್ಯಾಯಾಧೀಶರನ್ನು ನೇಮಿಸುವ ಕೆಲಸವೂ ಸರಾಗವಾಗಿ ನಡೆದಿದೆ. ಆದ್ದರಿಂದಲೇ ಬಂಡವಾಳಶಾಹಿ ಸಮಾಜದ ನ್ಯಾಯಾಂಗಕ್ಕೆ "ತ್ಯಾಂಕ್ ಗಾಡ್" ಎಂದು ಹೇಳುವುದು. ಸತ್ಯ ಎಲ್ಲೋ ಇದೆ; ಹುಡುಕಾಡಿ ಕೊಡು ದೇವರೇ. ಅರ್ಥವಾಯಿತೇ.

ನಜೀಮಾ ಭಾಂಗಿ ಸಮಸ್ಯೆ

ಬಿಜಾಪುರದ ಕಾಲೇಜು ಶಿಕ್ಷಕಿ ನಜೀಮಾ ಭಾಂಗಿ ಚರಿತ್ರಾರ್ಹ ಗೋಳುಗುಮ್ಮಟದಷ್ಟೇ ಪ್ರಖ್ಯಾತಳಾಗಿದ್ದಾಳೆ. ಸಿನೇಮಾ ನೋಡುವುದು ಮುಸ್ಲಿಂ ಧರ್ಮಕ್ಕೆ ವಿರೋಧವಾಗಿರುವುದರಿಂದ, ಮುಸ್ಲಿಂ ಮಹಿಳೆಯರು ಸಿನೇಮಾ ನೋಡಬಾರದೆಂಬ ಪ್ರತಿಬಂಧ ಹೇರಲಾಗಿತ್ತು. ನಜೀಮಾ ಭಾಂಗಿ ಸಿನೆಮಾ ನೋಡುತ್ತಿದ್ದಾಗ, ಕೆಲವು ಯುವಕರು ಸಿನೆಮಾ ಥಿಯೇಟರಿನೊಳಗೆ ಹೋಗಿ ತಕರಾರು ಮಾಡಿದಾಗ, ನಜೀಮಾ ಪೋಲೀಸರಿಗೆ ತಿಳಿಸಿ–ಳು. ತಮ್ಮ ಧರ್ಮ ಸಿನೆಮಾ ನೋಡಬಾರದೆಂದು ಹೇಳುತ್ತಿಲ್ಲ. ಒಳ್ಳೆ ಸಿನೆಮಾಗಳು ಬಂದರೆ ನಾನು ನೋಡುವಾಕೆ ಎಂಬ ಪ್ರಕಟನೆ. ಆಕೆಯ ಮೇಲೆ ಆಕ್ರಮಣಕ್ಕೆ ನಾಂದಿಯಾಯಿತು. ಆಕೆಯ ಬೆಂಬಲಾರ್ಥ ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿ ಪ್ರಥಮವಾಗಿ ಬೆಂಬಲ ವ್ಯಕ್ತಮಾಡಿ, ಯುವಕರು ಹಾಗೆಯೇ ಇಡೀ ಜನತೆ ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ ಭ್ರಷ್ಟಾಚಾರ ಮೊದಲಾದ ಗಂಭೀರ ಸಮಸ್ಯೆಗಳನ್ನೆದುರಿಸುತ್ತಿರುವಾಗ, ಮುಸ್ಲಿಂ ಯುವಕರು ಜನಸಂಘಟನೆ ಮಾಡಿ ಇಂಥ ಅನಿಷ್ಟಗಳ ವಿರುದ್ಧ ಹೋರಾಡದೆ, ಮುಸ್ಲಿಂ ಹೆಣ್ಣುಮಕ್ಕಳು ಸಿನೆಮಾ ನೋಡಬಾರದೆಂಬ ಚಳುವಳಿಯಲ್ಲಿ ಶ್ರಮ ವ್ಯಯಿಸುವುದು ಸರಿಯಲ್ಲವೆಂಬ ಅಭಿಪ್ರಾಯ ವ್ಯಕ್ತಮಾಡಿತು. ಪತ್ರಿಕಾಕರ್ತರು ನಜೀಮಾಳ ಹೇಳಿಕೆಯನ್ನು ವಿವರವಾಗಿ ಪ್ರಕಟಿಸಿದಾಗ ಅವರ ಮೇಲೆ ಹಲ್ಲೆಮಾಡಲಾಯಿತು. ನೂರಾರು ಜನ ನಜೀಮಾಳ ಜೀವಕ್ಕೆ ಹಾನಿಯುಂಟುಮಾಡಲು ಪ್ರಯತ್ನಿಸಿದಾಗ, ಅವರ ಒತ್ತಾಯಕ್ಕೆ ಮಣಿದು ಮುಸ್ಲಿಂ ಧರ್ಮಕ್ಕೆ ಅವಹೇಳನ ಮಾಡಿದಳೆಂಬ ಆರೋಪ ಹೊರಿಸಿ ಖಟ್ಲೆ ಹಾಕಲಾಯಿತು. ಕುಡಿಯುವ ನೀರು ನಿಲ್ಲಿಸಲಾಯಿತು. ನೌಕರಿಯಿಂದ ಸಸ್ಪೆಂಡ್ ಮಾಡಲಾಯಿತು. ಕರ್ನಾಟಕದಲ್ಲಿಯಷ್ಟೇ ಅಲ್ಲ ದೇಶಾದ್ಯಂತ ಹಿಂದೂ, ಮುಸ್ಲಿಂ ವ್ಯಕ್ತಿಗಳೂ ನಜೀಮಾಳ ಮೇಲೆ ಹೇರಿದ ಬಹಿಷ್ಕಾರವನ್ನೂ, ಸಿನೆಮಾ ನೋಡಬಾರದೆಂಬ ಪ್ರತಿಬಂಧವನ್ನೂ, ನೌಕರಿಯಿಂದ ಸಸ್ಪೆಂಡ್ ಮಾಡಿದ್ದನ್ನೂ ವಿರೋಧಿಸಿ, ಆಕೆಯ ಕ್ರಮಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಮಾಡಿದ್ದಾರೆ.

ಖುರಾನಿನಲ್ಲಾಗಲೀ ಮುಸ್ಲಿಂ ಧರ್ಮದಲ್ಲಾಗಲೀ ಮುಸ್ಲಿಂ ಮಹಿಳೆಯರು ಸಿನೆಮಾ ನೋಡಬಾರದೆಂಬ ಉಲ್ಲೇಖ ಇಲ್ಲದಿದ್ದರೂ ಕೂಡ ಕೆಲವು ಜಾತೀಯವಾದಿಗಳು ಈರೀತಿ ಇಡೀ ಸಮಾಜದ ಮೇಲೆ ಪ್ರತಿಬಂಧ ಹೇರುತ್ತಿರುವುದು ಅಪಾಯಕಾರಿ. ಸಮಾಜದ ಹಳೇ ಕಟ್ಟಳೆಗಳಿಗೆ ಹೆದರಿ ಈ ಜಾತೀಯವಾದಿ ಸಂಕುಚಿತ ಕ್ರಮವನ್ನು ಎದುರಿಸಲು ಯಾರೂ ಮುಂದೆ ಬರುತ್ತಿಲ್ಲ. ಪುರೋಗಾಮಿ ವಿಚಾರಸರಣಿಯ ಪ್ರಜಾಪ್ರಭುತ್ವ ವಿಚಾರದ, ಶಕ್ತಿಗಳ ನಿಶ್ಶಕ್ತತೆಯನ್ನು ಇದು ತೋರಿಸಿಕೊಡುತ್ತದೆ. ಮಹಿಳಾ ಸಂಘಟನೆ, ಯುವಜನ, ವಿದ್ಯಾರ್ಥಿ, ಎರಡೂ ಕಮ್ಯುನಿಸ್ಟ ಪಾರ್ಟಿಗಳು, ಹಲವಾರು ವ್ಯಕ್ತಿಗಳು ನಜೀಮಾಳ ಮೇಲೆ ನಡೆಯುತ್ತಿರುವ ಅತ್ಯಾಚಾರದ ಮೂಲ ಸಿದ್ಧಾಂತವನ್ನು ಅರಿತು, ನಾಗರೀಕ, ಪ್ರಜಾಪ್ರಭುತ್ವ ಹಕ್ಕುಗಳ, ವ್ಯಕ್ತಿಸ್ವಾತಂತ್ರ್ಯದ ಹಕ್ಕುಗಳಿಗಾಗಿ ಪ್ರತಿಪಾದನೆ ಮಾಡುತ್ತಿದ್ದರೂ ಕೂಡ, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಆಯಾ ಜಾತಿಯ ಅದರಲ್ಲೂ ಮುಸ್ಲಿಂ ಜನತೆಯನ್ನು ಬಂಧಿಸಿಟ್ಟಂತೆ ಮಾಡುವ ಕಟ್ಟಳೆಯಿಂದಾಗಿ, ನಜೀಮಾ ಭಾಂಗಿಯ ಪ್ರಕರಣದಲ್ಲಿ ಎಷ್ಟು ಪ್ರತಿಭಟನೆ, ಜನಾಭಿಪ್ರಾಯ ಮೂಡಿಬರಬೇಕಾಗಿತ್ತೋ ಅಷ್ಟು ಬಾರದಿರುವುದು ಎಡಪ್ರಜಾಪ್ರಭುತ್ವ ಶಕ್ತಿಗಳ ಬಲಹೀನತೆಯನ್ನು ತೋರ್ಪಡಿಸುತ್ತದೆ.

ಮುಸಲ್ಮಾನರ ಮತಗಳ ಮೇಲೆಯೇ ಕಣ್ಣಿಟ್ಟ ಆಳುವ ಇಂದಿರಾ ಪಕ್ಷವಾಗಲೀ, ಜನತಾಪಾರ್ಟಿ, ಕಾಂಗ್ರೆಸ್ (ಎಸ್) ನವರಾಗಲೀ ಇಡೀ ಸಮಾಜದ ಮೇಲೆ ಪರಿಣಾಮ ಬೀರುವ ಈ ಘಟನೆಯ ಕುರಿತು ಪ್ರತಿಕ್ರಿಯೆ ವ್ಯಕ್ತಮಾಡಲು ಹಿಂಜರಿಯುತ್ತಿದ್ದಾರೆ. ಭಾರತೀಯ ಜನತಾಪಾರ್ಟಿಯವರು ಪತ್ರಿಕಾ ಪ್ರಕಟನೆಕೊಟ್ಟು ಮೌನತಾಳಿದ್ದಾರೆ. ಸರಕಾರ ಮತ್ತು ಪೋಲೀಸ್ ಅಧಿಕಾರಿಗಳು, ನಜಮಾಳ ಮೇಲೆ ನಡೆಯುತ್ತಿರುವ ಅತ್ಯಾಚಾರಕ್ಕೆ ಪ್ರತ್ಯಕ್ಷವಾಗಿಯೇ ಬೆಂಬಲ ಕೊಡುತ್ತಿದ್ದಾರೆಂಬುದಕ್ಕೆ ಪತ್ರಿಕಾಕರ್ತರ ಮೇಲೆ ನಡೆದ ಧಾಳಿ ಹಾಗೂ ನಜಮಾಳ ಮನೆಮೇಲೆ ನಡೆದ ಅನ್ಯಾಯ, ಆಕೆಯ ಮೇಲೆ ಹಾಕಲ್ಪಟ್ಟ ಖಟ್ಲೆಗಳೇ ಸಾಕ್ಷಿ.

ಕರ್ನಾಟಕ ಮಾಧ್ಯಮಿಕ ಶಾಲೆ ಶಿಕ್ಷಕರ ಸಂಘದವರು ನಜಮಾಳ ಸಸ್ಪೆಶನ್ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ವಿಚಾರವಂತರೆಲ್ಲ ಇದಕ್ಕೆ ಬೆಂಬಲ ಕೊಡುವುದಗತ್ಯ.

ಮುಸಲ್ಮಾನ ಮಹಿಳೆಯರು ಸಿನೆಮಾ ನೋಡಬಾರದೆಂಬ ಬಿಜಾಪುರದಲ್ಲಿ ಪ್ರಾರಂಭವಾದ ಚಳುವಳಿ ಇತರೆಡೆಗಳಲ್ಲೂ ಹಬ್ಬುವ ಸಂಭವವಿದೆ. ಈರೀತಿಯ ವಿಚ್ಛಿದ್ರಕಾರಿ ಧಾಳಿ ನಡೆಯಲು ಕಾರಣವೇನೆಂಬುದರ ವಿಶ್ಲೇಷಣೆ ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿಯ ಹನ್ನೊಂದನೇ ಸಮ್ಮೇಳನಕ್ಕೆ ತಯಾರಿಸಿದ ಕರಡು ವರದಿಯಲ್ಲಿ ಕಾಣಬಹುದು.

"ಇಂದು ಬಹುಸಂಖ್ಯಾತ ಮುಸಲ್ಮಾನರು, ಸಾಮಾನ್ಯವರ್ಗ ಮತ್ತು ಜನತಾಂತ್ರಿಕ ಹೋರಾಟಗಳಿಂದ ದೂರ ಉಳಿದಿದ್ದಾರೆ. ಸಾಮೂಹಿಕ ಸಂಘಟನೆಗಳು ಇದನ್ನು ಗಂಭೀರವಾಗಿ ಗಮನಿಸಿಲ್ಲ. ಈ ಪರಿಸ್ಥಿತಿಯನ್ನು ಪ್ರತಿಗಾಮಿ ಮತೀಯ ನಾಯಕರುಗಳು ಉಪಯೋಗಿಸಿಕೊಂಡು, ಅಲ್ಪಸಂಖ್ಯಾತ ಪ್ರತ್ಯೇಕತೆ ಮತ್ತು ಮತೀಯತೆಯ ಮನವಿಗಳನ್ನು ಮಾಡುತ್ತ ಮುಸ್ಲಿಂ ಸಮುದಾಯ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜೊತೆ ಸೇರದಂತೆ ಮಾಡುತ್ತಿದ್ದಾರೆ.

"ಮುಸ್ಲಿಂ ಸಮುದಾಯವು ತನ್ನ ಆರ್ಥಿಕ ಪರಿಸ್ಥಿತಿಯಿಂದಾಗಿ, ಪ್ರತಿಗಾಮಿ ಶಕ್ತಿಗಳ ಪ್ರಭಾವದಿಂದಾಗಿ ಸಾಮ್ರಾಜ್ಯವಾದ ಮತ್ತು ಅಂತರರಾಷ್ಟ್ರೀಯ ಮುಸ್ಲಿಂ ಪ್ರತಿಗಾಮಿ ಹಿತಾಸಕ್ತಿಗಳಿಗೆ ಅನುಗುಣವಾದ "ಇಸ್ಲಾಮಿಕ್ ಫಂಡಮೆಂಟಲಿಸಂ"ನ ಮನವಿನ ಬಲಿಬೀಳುವ ಸಾಧ್ಯತೆ ಇದೆ.

"ಮುಸ್ಲಿಂ ಬಹುಮತವಿರುವ ಎಲ್ಲ ದೇಶಗಳಲ್ಲೂ ಜನತಾಂತ್ರಿಕ ಮತ್ತು ದುಡಿಯುವ ವರ್ಗದ ಹೋರಾಟಗಳ ಮೇಲೆ ಮುಸ್ಲಿಂ ಫಂಡಮೆಂಟಲಿಸಂ ಧಾಳಿಮಾಡುತ್ತಿದ್ದು ಸಾಮ್ರಾಜ್ಯವಾದ ಹಾಗೂ ಸ್ಥಳೀಯ ಧಾರ್ಮಿಕ ಹಿತಾಸಕ್ತಿಗಳನ್ನು ರಕ್ಷಿಸುತ್ತಿದೆ.

"ಭಾರತದಲ್ಲಿ ಇದರ ಉದ್ದೇಶ ಮುಸ್ಲಿಮರಲ್ಲಿ ರಾಷ್ಟ್ರೀಯ ಐಕ್ಯತೆಗೆ ಮಾರಕವಾಗುವ ಪ್ರತ್ಯೇಕತಾ ಭಾವನೆಯನ್ನು ಬಿತ್ತುವುದು".

ಸೌದೀ ಅರೇಬಿಯಾ ಮತ್ತಿನ್ನಿತರ ಮುಸ್ಲಿಂ ರಾಷ್ಟ್ರಗಳಿಂದಲೂ ಹಣ ಪಡೆದು ಜಾತೀಯ ಭಾವನೆಯ ವಿಷ ಬಿತ್ತುತ್ತಿರುವುದನ್ನು ಪ್ರಜಾಪ್ರಭುತ್ವ ಶಕ್ತಿಗಳು ಎದುರಿಸಬೇಕಾಗಿದೆ.

ಚುನಾವಣೆಯಲ್ಲಿ ಮುಸಲ್ಮಾನರ ಮತಕ್ಕಾಗಿಯೇ ಹಾತೊರೆಯುತ್ತಿರುವ ಬಂಡವಾಳಶಾಹಿ ರಾಜಕೀಯ ಪಕ್ಷಗಳು ನಜೀಮಾಳು ಎದುರಿಸುತ್ತಿರುವ ಸಮಸ್ಯೆಗಳನ್ನೆತ್ತಿಕೊಂಡು ಹೋರಾಡಲು ಮುಂದೆ ಬರುತ್ತಿಲ್ಲ.

ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿ, ಇತರ ಸಾಮೂಹಿಕ ಸಂಘಟನೆಗಳೊಡನೆ ಕೂಡಿಕೊಂಡು ಇಂಥ ಪ್ರತಿಗಾಮಿ, ಜಾತೀಯ ಶಕ್ತಿಗಳ ವಿರುದ್ಧ ಹೋರಾಡಿ ನಜಮಾಳಂತ ಮಹಿಳೆಯರು ಧೈರ್ಯದಿಂದ ಹೋರಾಡುವ ಧ್ಯೇಯಕ್ಕೆ ಬೆಂಬಲ ಕೊಡಲೇಬೇಕು.

ರಾಜ್ಯ ಸರಕಾರಿ ನೌಕರರ ಮುಷ್ಕರ

ಸಂಬಳದ ವಿಮರ್ಶೆ, 58ಕ್ಕೆ ನಿವೃತ್ತಿ, 10 ವರ್ಷ ಸರ್ವಿಸಿಗೆ ಬಡ್ತಿ ಮೊದಲಾದ ಬೇಡಿಕೆಗಳಿಗಾಗಿ ಕರ್ನಾಟಕ ರಾಜ್ಯಸರಕಾರಿ ನೌಕರರು ಜನವರಿ 6, 1982ರಿಂದ ಮುಷ್ಕರ ಹೂಡುತ್ತಾರೆ. ಕಾರ್ಮಿಕವರ್ಗವೆಲ್ಲ ಈ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಿದೆ. ಕರ್ನಾಟಕ ರಾಜ್ಯದ ಬೆಳ್ಳಿ ಹಬ್ಬ, ನವೆಂಬರ್ 1ರಂದೇ ನೌಕರರ ಬೇಡಿಕೆಗಳ ಕುರಿತು ನಿರ್ಣಯ ಸಾರಲಾಗುವುದೆಂದು ಮುಖ್ಯಮಂತ್ರಿ ಗುಂಡೂರಾವ್ ಘೋಷಿಸಿದ್ದು, ಅದು ಕಾರ್ಯರೂಪದಲ್ಲಿ ಬಾರದ್ದರಿಂದ ಈ ಮುಷ್ಕರ ಅನಿವಾರ್ಯವಾಗಿದೆ.

ನೌಕರರ ಪಗಾರ ಸ್ಕೇಲು, ನಿವೃತ್ತಿ ವಯಸ್ಸು, ಇತರ ಸೌಲಭ್ಯಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರಕಾರಗಳೊಳಗೆ ಏಕರೂಪದ ನಿಲುಮೆ ಇಲ್ಲದಿರುವುದರಿಂದ ಕೇಂದ್ರ ಹಾಗೂ ರಾಜ್ಯಗಳ ನೌಕರರಲ್ಲಿ ಬಹಳ ದಿವಸಗಳಿಂದ ಅಸಮಾಧಾನದ ಹೊಗೆಯಾಡುತ್ತಲೇ ಇದೆ. ಕರ್ನಾಟಕ ಮತ್ತೆರಡು ರಾಜ್ಯಗಳನ್ನು ಬಿಟ್ಟರೆ, ಕೇಂದ್ರ ನೌಕರರನ್ನೊಳಗೊಂಡು ಎಲ್ಲರ ನಿವೃತ್ತಿ ವಯಸ್ಸು 58. ಕೇಂದ್ರ-ಕರ್ನಾಟಕ 3ನೇ. ವರ್ಗ ನೌಕರರೊಳಗೆ ರೂ. 115 ಅಂತರ, ಕೇರಳ-ಆಂಧ್ರ-ಕರ್ನಾಟಕದ 3ನೇ ವರ್ಗ ನೌಕರರ ಪಗಾರದಲ್ಲಿ ರೂ. 40

(7ನೇ ಪುಟ ನೋಡಿ)

ಕಾರ್ಮಿಕ ವಿರೋಧಿ ಸರಕಾರ

ರಾಜ್ಯದ ಗುಂಡೂರಾವ್ ಸರಕಾರ ಮಾಲೀಕರ ಪರ ಹಾಗೂ ಕಾರ್ಮಿಕವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ರಾಜ್ಯದ ನಾನಾ ಭಾಗಗಳಲ್ಲಿ ತಮ್ಮ ಬೇಡಿಕೆಗಳಿಗೋಸ್ಕರ ಹೋರಾಡುತ್ತಿರುವ ಕಾರ್ಮಿಕ ಬಾಂಧವರ ಮೇಲೆ ಲಾಠೀಚಾರ್ಜ್, ದಬ್ಬಾಳಿಕೆ ದಿನನಿತ್ಯದ ಮಾತಾಗಿದೆ.

ಇದಕ್ಕೆ ಅನೇಕ ದೃಷ್ಟಾಂತಗಳನ್ನು ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ಸಿ. ನಂಜುಂಡಪ್ಪನವರು ಪತ್ರಕರ್ತರಿಗೆ ನೀಡಿದರು. ದಿನಾಂಕ 27-12-81ರಂದು ಬೆಂಗಳೂರಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ಸಿ. ನಂಜುಂಡಪ್ಪನವರು ನೀಡಿದ ಪತ್ರಿಕಾ ಹೇಳಿಕೆಯ ಪೂರ್ತಿ ಪಾಠವು ಇದೆ:

1981ರ ಜನವರಿಯಿಂದಲೇ ಕಾರ್ಮಿಕ ಮಂತ್ರಿ ಜಕನೂರ್ ಅವರು ಕನಿಷ್ಠ ವೇತನವನ್ನು ಪರಿಷ್ಕರಿಸುವ ಮಾತನಾಡುತ್ತಿದ್ದರು. ಸರಕಾರ ಏಪ್ರಿಲ್‌ನಲ್ಲಿ ಕನಿಷ್ಠ ವೇತನದ ಕರಡು ಸಲಹೆಗಳನ್ನು ಪ್ರಕಟಿಸಲು ಆರಂಭವಾಗಿತ್ತು. ಕೊನೆಯಲ್ಲಿ ಯೋಜಿಸಲಾಗಿರುವ ಈಗಿನ ದರಗಳು ಕರಡು ಸಲಹೆಗಳಲ್ಲಿದ್ದಂಥ ದರಗಳಿಗಿಂತ ತೀರ ಕಡಿಮೆಯಾಗಿವೆ. ಬೀಡಿಕಾರ್ಮಿಕರ ಕನಿಷ್ಠ ಕೂಲಿಯ ಗತಿ ಏನಾಗಿದೆಯೋ ಆದೇರೀತಿಯಲ್ಲಿ ಈಗ ಇವುಗಳಲ್ಲಿ ಸಹ ಜೀವನಾವಶ್ಯಕ ವಸ್ತುಗಳ ಬೆಲೆಏರಿಕೆ ಗಣನೆಗೆ ಸಂಬಳ ನಿರ್ಧರಿಸುವುದನ್ನು ಕೈಬಿಡಲಾಗಿದೆ."

"ಪ್ಯೂಕೋ ಮತ್ತು ಬಿನ್ನಿ ಕಾರ್ಖಾನೆಗಳಲ್ಲಿ ಆದ ಕಾರ್ಮಿಕವಿರೋಧಿ ಒಪ್ಪಂದಗಳನ್ನು ಸರಕಾರ ಪುರಸ್ಕರಿಸುತ್ತಿದೆ. ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರಿಗೆ ನೀಡಿದ ಆಶ್ವಾಸನೆ ಪೂರೈಸಲಾಗಿಲ್ಲ."

"ಇಂಜಿನೀಯರಿಂಗ್ ಮತ್ತು ಇತರ ಕ್ಷೇತ್ರಗಳಲ್ಲಿ ಲಕ್ಷಾಂತರ ಕಾಂಟ್ರಾಕ್ಟ್ ಕಾರ್ಮಿಕರಿದ್ದಾರೆ. ಅವರೆಲ್ಲ ಮಾಲೀಕರ ಕೃಪೆಯಿಂದ ಕಾಲತಳ್ಳುವ ಪರಿಸ್ಥಿತಿ ಇದೆ. ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಲು ಸರಕಾರ ಸಿದ್ಧವಿಲ್ಲ."

"ಕಾರ್ಮಿಕ ಇಲಾಖೆಯಲ್ಲಿ ಖಾಲಿಯಿರುವ ಅನೇಕ ಸ್ಥಳಗಳನ್ನು ಭರ್ತಿ ಮಾಡಿಲ್ಲ. ಉದಾಹರಣೆಗೆ ಮಂಗಳೂರಿನಲ್ಲಿ ಲೇಬರ್ ಆಫೀಸರರ ಸ್ಥಾನ ಸುಮಾರು ಒಂದು ವರ್ಷದಿಂದ ಖಾಲಿ ಇದೆ. ಅಲ್ಲಿಯ (ಮಂಗಳೂರಿನ) ಲೇಬರ್ ಕೋರ್ಟಿನ ಪ್ರಿಸೈಡಿಂಗ್ ಆಫೀಸರರ ಸ್ಥಾನ ಖಾಲಿಯಾಗಿ ಸುಮಾರು 6 ತಿಂಗಳುಗಳಾಗಿವೆ. ಈ ಕಾರಣದಿಂದಾಗಿ ಕಾರ್ಮಿಕ ವಿವಾದಗಳು ಬಗೆಹರಿಯಲು ತೀರ ವಿಳಂಬವಾಗಿದೆ."

ಜನವರಿ 19ರಂದು ರಾಷ್ಟ್ರೀಯ ಆಂದೋಲನ ಸಮಿತಿಯು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದನ್ನು ಸ್ವಾಗತಿಸಿರುವ ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ನಂಜುಂಡಪ್ಪನವರು ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಿ.ಐ.ಟಿ.ಯು. ರಾಜ್ಯ ಕೌನ್ಸಿಲ್ ಸಭೆ ಈ ಮುಷ್ಕರವನ್ನು ಪ್ರಚಂಡವಾಗಿ ಯಶಸ್ವಿಗೊಳಿಸಲು ತೀರ್ಮಾನಿಸಿರುವುದನ್ನು ಪತ್ರಕರ್ತರಿಗೆ ತಿಳಿಸಿದರು.

ಜನವರಿ 6ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ತೆರಳಲಿರುವ ರಾಜ್ಯ ಸರಕಾರಿ ನೌಕರರನ್ನು, ಜನವರಿ 18ರಿಂದ ಪ್ರಾರಂಭವಾಗಲಿರುವ ವಿದ್ಯುಚ್ಛಕ್ತಿ ನೌಕರರ ಹೋರಾಟಕ್ಕೂ ಬೆಂಬಲ ಸೂಚಿಸಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಿ ಹೋರಾಟ ತೀವ್ರಗೊಳಿಸಲು ಕಾರ್ಮಿಕರಿಗೆ ಕರೆ ನೀಡಿದ್ದಾರೆ. ●

ಬೀಡಿ ಕಾರ್ಮಿಕರ ಹೋರಾಟಕ್ಕೆ ಕರೆ

ಸರಕಾರವು ಕಳೆದ ಒಂದು ವರ್ಷದಿಂದ ಬೀಡಿ ಮಜೂರರ ಕನಿಷ್ಠ ವೇತನವನ್ನು ಪರಿಷ್ಕರಿಸುತ್ತೇನೆ ಎಂದು ಆಶ್ವಾಸನೆ ಕೊಡುತ್ತಾ ಈಗ ಕನಿಷ್ಠ ವೇತನದ ಸಲಹಾ ಸಮಿತಿ ಬಹುಮತದಲ್ಲಿ ಮಜೂರರು ಮಾಡಿದ ಸರಕಾರ ಪ್ರಕಟಣೆಯನ್ನು ಬದಿಗೆ ಇಟ್ಟು ಸಾವಿರ ಬೀಡಿಕಟ್ಟಿದ್ದಕ್ಕೆ ಕೇವಲ ರೂ. 7-40 ಎಂದು ಗೆಜೆಟಿನಲ್ಲಿ ಪ್ರಕಟಿಸಿದ್ದನ್ನು ತಾ. 21-12-1981ರಂದು ಸೇರಿದ ಬೀಡಿ ಮಜೂರರ ದ. ಕ. ಜಿಲ್ಲಾ ಫೆಡರೇಶನಿನಲ್ಲಿ ತೀವ್ರವಾಗಿ ಖಂಡಿಸಿತು. ಇದರಿಂದ ಕಾಂಗ್ರೆಸ್ ಸರಕಾರ ಮಾಲಕರಿಗೆ ರೂ. 40 ಕೋಟಿಗೂ ಅಧಿಕ ಲಾಭ ಗಳಿಸಿಕೊಟ್ಟಿದೆ. ಸರಕಾರದ ಈ ವಂಚನೆಯ ವಿರುದ್ಧ ತೀವ್ರ ಚಳುವಳಿಗೆ ಕರೆ ನೀಡಿದೆ.

ಬೀಡಿ ಮಜೂರರ ಎವರೇಜಿನ ಬಗ್ಗೆ ಬ್ರಾಂಚು ಮುಷ್ಕರದ ಬಗ್ಗೆ ಹಾಗೂ ಹಲವಾರು ವಿವಾದಗಳು ವರ್ಷಗಟ್ಟಲೆ ಲೇಬರ್ ಆಫೀಸರ ಮುಂದೆ ಇನ್ನೂ ಇತ್ಯರ್ಥವಾಗದಿರುವುದರಿಂದ ಇದನ್ನು ಒತ್ತಾಯಿಸಲು ಪ್ರತ್ಯೇಕ ಕ್ರಮ ಕೈಗೊಳ್ಳಬೇಕೆಂದು ಫೆಡರೇಶನ್ ತೀರ್ಮಾನಿಸಿತು.

ತಾ. 19-1-1982ರಂದು ನಡೆಯುವ ಸಾರ್ವತ್ರಿಕ ಮುಷ್ಕರವನ್ನು ಸಂಪೂರ್ಣವಾಗಿ ಯಶಸ್ವಿ ಮಾಡಲು ಜಿಲ್ಲೆಯ ಎಲ್ಲಾ ಬೀಡಿ ಮಜೂರರಿಗೆ ಫೆಡರೇಶನ್ ಕರೆ ನೀಡಿತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಯು. ಬಿ. ಲೋಕಯ್ಯನವರು ವಹಿಸಿದ್ದರು. ○

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

(2ನೇ ಪುಟದಿಂದ)

ಕೇಂದ್ರ ಸರಕಾರವು ರೇಲ್ವೆ ಸರಕು ಸಾಗಾಣಿಕೆ ದರವನ್ನು ಶೇ. 10ರಿಂದ ಶೇ. 15ರ ವರೆಗೆ ಏರಿಸಲಿರುವುದು ಬೆಲೆಏರಿಕೆಯನ್ನು ಮತ್ತಷ್ಟು ಹೆಚ್ಚು ಮಾಡಲಿದೆ. ಈ ಕ್ರಮವನ್ನು ಕೈಬಿಡಬೇಕೆಂದು ಕೇಂದ್ರ ಸರಕಾರವನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒತ್ತಾಯಿಸಬೇಕೆಂದು ಈ ಸಮ್ಮೇಳನ ಕರೆಕೊಡುತ್ತದೆ.

ಆಹಾರಧಾನ್ಯಗಳ ಮೇಲಿನ ಮಾರಾಟ ತೆರಿಗೆ

ಮಹಾರಾಷ್ಟ್ರದಲ್ಲಿ ಆಹಾರಧಾನ್ಯಗಳ ಮೇಲೆ ಮಾರಾಟ ತೆರಿಗೆಯಿಲ್ಲ. ಮಾರ್ಕೆಟ್ ಸೆಸ್ ಬಹಳ ಕಡಿಮೆ. ಆದರೆ ಕರ್ನಾಟಕದಲ್ಲಿ ಶೇಕಡ 4 ಸೇಲ್ಸ್ ಟ್ಯಾಕ್ಸ್ ಮತ್ತು ಶೇಕಡ 2 ಮಾರ್ಕೆಟ್ ಸೆಸ್ ಹೇರಲಾಗುತ್ತಿದೆ. ನೇರವಾಗಿ ರೈತರ ಮೇಲೆ ಈ ಎರಡೂ ಕರಭಾರ ಬೀಳುತ್ತದೆ. ಕಾರಣ ರಾಜ್ಯದ ಹಲವಾರು ಜಿಲ್ಲೆಗಳ ಮಾರ್ಕೆಟ್ ಯಾರ್ಡ್‌ಗಳಿಗೆ ಆಹಾರಧಾನ್ಯ ಸಾಕಷ್ಟು ಬಾರದಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿರುವ ಹಮಾಲರು, ಕೈಗಾಡಿಯವರು, ಗುಡಿಸುವ ಹೆಣ್ಣು ಮಕ್ಕಳು ಕೆಲಸವಿಲ್ಲದೇ ಉಪವಾಸ ಬೀಳುವ ಪರಿಸ್ಥಿತಿ ಉಂಟಾಗಿದೆ. ವ್ಯಾಪಾರಕ್ಕೂ ಧಕ್ಕೆಯಾಗಿದೆ.

ವ್ಯಾಪಾರಸ್ಥರೂ, ದಳ್ಳಾಳಿಗಳೂ ನೇರವಾಗಿ ಹಳ್ಳಿಗಳಿಗೆ ಹೋಗಿ ಅಲ್ಲಿಯೇ ಲಾರಿಗಳ ಮೂಲಕ ಆಹಾರಧಾನ್ಯ ಕೊಂಡುಕೊಳ್ಳುತ್ತಿರುವುದರಿಂದ ರೈತರಿಗೆ ಕಡಿಮೆ ಬೆಲೆ ಸಿಕ್ಕಿ ಹಾನಿಯಾಗುತ್ತಿರುವುದು ಒಂದು ಕಡೆಯಾದರೆ, ನಮ್ಮ ಸರಕಾರದ ಶೇಕಡ 4 ಸೇಲ್ಸ್‌ಟ್ಯಾಕ್ಸ್, ಶೇಕಡ 2 ಮಾರ್ಕೆಟ್ ಸೆಸ್‌ನಿಂದಾಗಿ ಸುಲಿಗೆ ನಡೆಯುತ್ತಿದೆ. ಬಂಡವಾಳಶಾಹಿ ಕಾಂಗ್ರೆಸ್ ಸರಕಾರ ರೈತರನ್ನು ಸುಲಿಯುತ್ತಿರುವ ಹಲವಾರು ವಿಧಾನಗಳಲ್ಲಿ ಇದೂ ಒಂದು.

ಈ ಸೇಲ್ಸ್ ಟ್ಯಾಕ್ಸ್ ಮತ್ತು ಮಾರ್ಕೆಟ್ ಸೆಸ್‌ಗಳನ್ನು ಕೂಡಲೇ ರದ್ದು ಮಾಡಬೇಕೆಂದು ರಾಜ್ಯ ಸರಕಾರವನ್ನು ಈ ಸಮ್ಮೇಳನ ಒತ್ತಾಯಿಸುತ್ತದೆ.

ಮಲಪ್ರಭಾ ರೈತರ ಮೇಲೆ ಹಾಕಿರುವ ಮೊಕದ್ದಮೆ ವಾಪಸಾತಿಗೆ ಒತ್ತಾಯ

ಮಲಪ್ರಭಾ ರೈತರು ಅತೀ ದೊಡ್ಡ ರೀತಿಯಲ್ಲಿ ಹೋರಾಟಕ್ಕೆ ಇಳಿದು, ರಾಜ್ಯದಲ್ಲಿ ತೀವ್ರ ರೈತ ಚಳುವಳಿ ಬೆಳೆಯಲು ನಾಂದಿಯಾದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ನರಗುಂದ-ನವಲಗುಂದ ಬಂಡ್ ಕಾಲಕ್ಕೆ ಗೋಳಿಬಾರು, ಹಿಂಸೆ ನಡೆದ ಘಟನೆಯಿಂದಾಗಿ ರಾಜ್ಯದ ಇಡೀ ರೈತಾಪಿವರ್ಗ ಸಿಡಿದೇಳುವಂತಾಯಿತು. ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆದು ಸತ್ಯಾಂಶ ಹೊರಬರಬೇಕೆಂದು ರಾಜ್ಯದ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಸರ್ಕಾರಕ್ಕೆ ಒತ್ತಾಯಿಸಿದ್ದವು. ಈ ಹಿನ್ನಲೆಯಲ್ಲಿ ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡು ಕೆಂಪೇಗೌಡ ಆಯೋಗವನ್ನು ನೇಮಿಸಿತ್ತು.

ಕೆಂಪೇಗೌಡ ಆಯೋಗದ ವರದಿಯನ್ನು ಸರ್ಕಾರ ಬಚ್ಚಿಟ್ಟಿತ್ತು. ಈಗ ಒತ್ತಾಯದ ಹಿನ್ನಲೆಯಲ್ಲಿ ಪ್ರಕಟಿಸಿದೆ. ರೈತರು ನ್ಯಾಯಕ್ಕಾಗಿ, ತಮ್ಮ ಕುಂದುಕೊರತೆಗಳಿಗಾಗಿ ಅನೇಕ ದಿನಗಳಿಂದಲೂ ಒತ್ತಾಯ, ಹೋರಾಟ ನಡೆಸಿದಾಗಲೂ ಸರ್ಕಾರ, ಅಧಿಕಾರಿಗಳ ನಿಷ್ಕಾಳಜಿ, ಬೇಜವಾಬ್ದಾರಿಯ ಹಿನ್ನಲೆಯಲ್ಲಿ ಜುಲೈ 21, 80ರಂದು ಸಂಬಂಧ ಪಟ್ಟ ಪೋಲೀಸ್, ರೆವಿನ್ಯೂ ಅಧಿಕಾರಿಗಳ ಬೇಜವಾಬ್ದಾರಿತನದಿಂದಲೂ ಗೋಳಿಬಾರು ಮತ್ತು ಹಿಂಸಾತ್ಮಕ ಘಟನೆಗಳು ನಡೆದವೆಂದು ಕೆಂಪೇಗೌಡ ಆಯೋಗ ತೀರ್ಪು ನೀಡಿದೆ.

ಸರ್ಕಾರ ಆಯೋಗದ ವರದಿ ಆಧರಿಸಿ ಸೂಕ್ತ ಕ್ರಮವಹಿಸದಿದ್ದುದನ್ನು, ಕೇವಲ ಅಧಿಕಾರಿಗಳಿಗೆ ಎಚ್ಚರಿಕೆ ನೋಟಿಸನ್ನು ಕೊಡುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿರುವುದನ್ನು ಸಮ್ಮೇಳನ ಖಂಡಿಸುತ್ತದೆ.

ಈ ಕೂಡಲೇ, ಕೊಲೆ ಕೇಸುಗಳಿಗೆ ಒಳಪಡಿಸಿದ ರೈತರ ಮೇಲಿನ ಕೇಸುಗಳನ್ನು ಹಿಂತೆಗೆದುಕೊಂಡು ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಚಾರ್ಜ್‌ಶೀಟ್ ಕೊಟ್ಟು ತನಿಖೆ ನಡೆಸಿ ಶಿಸ್ತಿನ ಕ್ರಮಕೈಗೊಳ್ಳಬೇಕೆಂದೂ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

ಈ ಮೇಲ್ಕಾಣಿಸಿದ ನಿರ್ಣಯಗಳಲ್ಲದೇ ಪಶ್ಚಿಮ-ಬಂಗಾಳದಲ್ಲಿ ಚಂಡಮಾರುತದಿಂದ ಹಾನಿಉಂಟಾಗಿರುವುದರ ಕುರಿತು ಮೊದಲಾದ ನಿರ್ಣಯಗಳನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನವು ಅಂಗೀಕರಿಸಿದೆ. ●

ಬೆಳ್ಳಿಹಬ್ಬ

ದಿನಾಂಕ 6-1-82ರಂದು ಮೈಸೂರಿನಲ್ಲಿ "ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್"ನ ಬೆಳ್ಳಿಹಬ್ಬ ಸಮಾರಂಭ ನಡೆಯಲಿದೆ.

ಬಿಜಾಪುರದ ಮುನ್ಸಿಪಲ್ ಲೇಬರ್ ಯೂನಿಯನ್ ಅಧ್ಯಕ್ಷರಾದ ಕಾಂ. ಎಸ್. ಕೆ. ಉಪಾಧ್ಯಾಯರು ಉದ್ಘಾಟನೆ ಮಾಡಲಿರುವರು. ಸಿ. ಐ. ಟಿ. ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿರುವರು. ಮುಖ್ಯ ಅತಿಥಿಗಳಾಗಿ ಸಂಸತ್ ಸದಸ್ಯ ಕಾಂ. ಎಂ. ರಾಮಣ್ಣರೈ ಆಗಮಿಸಲಿರುವರು.

ಈ ಸಮಾರಂಭದ ಹಿಂದಿನ ದಿನ (5-1-82) ಮೈಸೂರಲ್ಲಿ ಪೌರ ಕಾರ್ಮಿಕರ ಪ್ರತಿನಿಧಿಗಳ ಸಮಾವೇಶ ನಡೆಯಲಿದೆ. ಸಿ.ಐ.ಟಿ.ಯು.ಗೆ ಸೇರಿರುವ ಮತ್ತು ಸೇರಲಿರುವ ಪೌರ ಕಾರ್ಮಿಕರ ಸಂಘಗಳು ಇಬ್ಬಿಬ್ಬರು ಪ್ರತಿನಿಧಿಗಳನ್ನು ಈ ಸಮಾವೇಶಕ್ಕೆ ಕಳಿಸಬೇಕೆಂದು ಕಾಂ. ಸಿ. ನಂಜುಂಡಪ್ಪ ತಿಳಿಸಿದ್ದಾರೆ. ●

ಎಸ್. ಎಫ್. ಐ. ಸಮ್ಮೇಳನ

ಡಿಸೆಂಬರ್ 18 ಮತ್ತು 19ರಂದು ರಾಯಚೂರಿನಲ್ಲಿ ಎಸ್.ಎಫ್.ಐ.ನ ಪ್ರಥಮ ಜಿಲ್ಲಾ ಸಮ್ಮೇಳನ ನಡೆಯಿತು.

ರಾಜ್ಯಸಮಿತಿ ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯ ಅವರು ಧ್ವಜಾರೋಹಣ ಮಾಡಿದರು. ಸಾಹಿತಿ ಶಾಂತರಸರು ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯಸಮಿತಿ ಉಪಾಧ್ಯಕ್ಷ ರುದ್ರಪ್ಪಕಾಯಿಯವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ಕೊನೆಯಲ್ಲಿ ಸಮ್ಮೇಳನವು 17 ಜನರ ನೂತನ ಜಿಲ್ಲಾ ಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಿತು. ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಕೆ. ವಿರೂಪಾಕ್ಷ, ಉಪಾಧ್ಯಕ್ಷರಾಗಿ ಮಂಜುಳ, ಕಾರ್ಯದರ್ಶಿಯಾಗಿ ಕೆ. ಬಸವರಾಜ, ಸಹಕಾರ್ಯದರ್ಶಿಯಾಗಿ ಎಚ್.ವಿ. ಗುಡಿ ಹಾಗೂ ಖಜಾಂಚಿಯಾಗಿ ರಾಜಶೇಖರರವರು ಆಯ್ಕೆಯಾಗಿದ್ದಾರೆ.

ರಾಯಚೂರಿನಲ್ಲಿ ವಿದ್ಯಾರ್ಥಿನಿಯರ ಹಾಸ್ಟಲ್ ಪ್ರಾರಂಭಿಸುವ ರಾಯಚೂರಿನ ತಾಂತ್ರಿಕ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೂ ಪ್ರವೇಶ ನೀಡಬೇಕೆನ್ನುವ, ಗಂಗಾವತಿ ಜ್ಯೂನಿಯರ ಕಾಲೇಜಿನ ವಿದ್ಯಾರ್ಥಿ ಸಂಘವನ್ನು ವಿಸರ್ಜಿಸುವ ಕ್ರಮವನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು. ●

ಪುತ್ತೂರಲ್ಲಿ ಮತಾಂತರ ಸಂಬಂಧ

ಆರೆಸ್ಸೆಸ್ಸಿಗರ ಪೈಶಾಚಿಕ ಕೃತ್ಯ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಾಳಪ್ಪ ಪೂಜಾರಿಯೆಂಬ ಯುವಕನೊಬ್ಬ ಸ್ವಃಇಚ್ಛೆಯಿಂದ ಒಂದು ವರ್ಷದ ಹಿಂದೆ ಇಸ್ಲಾಮಿಗೆ ಮತಾಂತರಗೊಂಡು, ಇದೀಗ ಉಳ್ಳಾಲದ ಅರೆಬಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆಂಬ ಸುದ್ದಿ ತಿಳಿದು, ಆತನನ್ನು ಸ್ವಧರ್ಮಕ್ಕೆ ಆಹ್ವಾನಿಸಲು ಆತನ ಮಾತಾ-ಪಿತರು ಮತ್ತು ವಿಶ್ವ ಹಿಂದೂ ಪರಿಷತ್ತಿನ ಮುಖಂಡರು ಆತನಿರುವಲ್ಲಿಗೆ ಹೋಗಿ ನಾನಾವಿಧವಾಗಿ ಮನವೊಲಿಸಿದರೂ ಆತ ಸಮ್ಮತಿಸದೆ, 'ತನ್ನನ್ನು ಯಾರೂ ಆಮಿಷ ತೋರಿ, ಒತ್ತಡ ಹೇರಿ ಅಥವಾ ಬಲಾತ್ಕರಿಸಿ ಮತಾಂತರಗೊಳಿಸಿಲ್ಲವೆಂದೂ, ತಾನು ಸ್ವತಃ ಇಚ್ಛೆಯಿಂದ ಇಸ್ಲಾಮಿಗೆ ಮತಾಂತರವಾಗಿದ್ದೇನೆಂದೂ, ತಾನಿನ್ನು ಎಷ್ಟು ಮಾತ್ರಕ್ಕೂ ಇಸ್ಲಾಂ ಬಿಟ್ಟು, ಹಿಂದಿನ ಧರ್ಮಕ್ಕೆ ಹಿಂತಿರುಗುವ ಪ್ರಶ್ನೆಯೇ ಇಲ್ಲವೆಂದೂ ಉಳ್ಳಾಲ ಪೋಲೀಸ್‌ಠಾಣೆಯಲ್ಲಿ ಹೇಳಿಕೆ ನೀಡಿರುತ್ತಾನೆ. ಇದರಿಂದ ಮುಖಭಂಗವಾದ ವಿಶ್ವಹಿಂದೂ ಪರಿಷತ್ತಿನವರು 'ಬಾಳಪ್ಪ ಪೂಜಾರಿಯನ್ನು ನಮಗೆ ಕೊಡಲೇಬೇಕು, ಇಲ್ಲದಿದ್ದರೆ ನಮ್ಮಲ್ಲಿ ಜನವಿದೆ, ಗಲಾಟೆ ಮಾಡುತ್ತೇವೆ' ಎಂದು ಪುತ್ತೂರಿನ ಮುಸ್ಲಿಂ ಮುಖಂಡರನ್ನು ಬೆದರಿಸಿ, ಮರುದಿನವೇ ಕಾಲೇಜು ವಿದ್ಯಾರ್ಥಿಗಳ ಮೆರವಣಿಗೆ ಸಾಗಿಸಿ, ನಗರಬಂದ್ ಮಾಡಿಸಿದರು. ವಿವಾದವನ್ನು ಸಾಮರಸ್ಯದಿಂದ ಮುಗಿಸೋಣವೆಂದು ಸ್ಥಳೀಯ ಬಿ. ಜೆ. ಪಿ. ಶಾಸಕರು ಮುಸ್ಲಿಂ ಮುಖಂಡರನ್ನು ಪ್ರವಾಸಿ ಮಂದಿರಕ್ಕೆ ಕರೆದು. ಇತ್ತ ತಾವು ಪಂಚಾಯ್ತಿಕೆಯ ನಾಟಕವಾಡಿ, ಅತ್ತ ಲೂಟಿ, ದೊಂಬಿ ಮಾಡುವಂತೆ ತನ್ನ ಗೂಂಡಾಗಳಿಗೆ ಪ್ರಚೋದಿಸಿದರು. ಮುಸ್ಲಿಮರ ಮೇಲೆರಗಲೆಂದೇ ಸಾಕಿದ ಆರೆಸ್ಸೆಸ್‌ನವರು ನಗರ ವ್ಯಾಪ್ತಿಯೊಳಗಿರುವ ಮೂರು ಮಸೀದಿಗಳಿಗೆ ಮುತ್ತಿಗೆ ಹಾಕಿ ಧ್ವಂಸ ಮಾಡಿದರಲ್ಲದೆ, ಬಾಗಿಲು ಮುಚ್ಚಿಕೊಂಡಿದ್ದ ಅನೇಕ ಮುಸ್ಲಿಮರ ಅಂಗಡಿ, ಹೋಟೆಲ್‌ಗಳನ್ನು ಬಾಗಿಲು ಒಡೆದು, ಒಳಗಿದ್ದ ಸಾಮಾಗ್ರಿಗಳನ್ನು ಪುಡಿಗೈದು, ಬೆಲೆಬಾಳುವ ವಸ್ತುಗಳನ್ನು ದೋಚಿ ಹಗಲು ದರೋಡೆ ಮಾಡಿದರು. ಪ್ರವಾಸಿ ಮಂದಿರದಲ್ಲಿ ಪಂಚಾಯ್ತಿಕೆಯಲ್ಲಿದ್ದಾಗ, ಗಲಭೆಯ ವಿಚಾರ ತಿಳಿದು. 'ನಿಮ್ಮ ಜನರು ಗಲಭೆ ಮಾಡುತ್ತಿದ್ದಾರೆಂದು ಮುಸ್ಲಿಮರು ಶಾಸಕರಲ್ಲಿ ದೂರಿತ್ತರು. ಗಲಭೆಯಾಗದಂತೆ ನೋಡಿಕೊಳ್ಳುತ್ತೇನೆಂದ ಶಾಸಕರು ಗಲಭೆಯ ಜಾಗಕ್ಕೆ ಬಂದು, ಪುನಃ ಗೂಂಡಾಗಳನ್ನು ಪ್ರಚೋದಿಸಿ, ಉರಿಯುತ್ತಿರುವ ಬೆಂಕಿಗೆ ಎಣ್ಣೆ ಸುರಿದು ಮರಳಿದರು. ಸಂತೆಗೆ ವ್ಯಾಪಾರಕ್ಕೆಂದು ಬಂದ ನೂರಾರು ಬಡಪಾಯಿ ಮುಸ್ಲಿಮರ ಮೀನು, ತರಕಾರಿ ಇತ್ಯಾದಿಗಳನ್ನು ರಸ್ತೆಗೆ ಚೆಲ್ಲಿ, ಅವರ ಮೇಲೆ ಸಿಕ್ಕಾಪಟ್ಟೆ ಹಲ್ಲೆ ನಡೆಸಿದರು. ರಸ್ತೆಯಲ್ಲಿ ಸಾಗುತ್ತಿದ್ದ ಪ್ರತೀ ಬಸ್ಸು, ಕಾರು, ಆಟೋರಿಕ್ಷಾಗಳನ್ನು ತಡೆದು ನಿಲ್ಲಿಸಿ, ಯಾರಿದ್ದಾರೆ ಮುಸ್ಲಿಮರೆಂದು ಹುಡುಕಿ ಎಳೆದು ಥಳಿಸಿದರು. ಮದ್ದಿಗೆಂದು ಆಸ್ಪತ್ರೆಗೆ ಬಂದ ಸ್ತ್ರೀಯರ ಬುರ್ಖಾ ಎಳೆದು ಅವಮಾನಿಸಿದರು. ಶಾಸಕರ ಮಾರ್ಗದರ್ಶನ, ವಿಶ್ವ ಹಿಂದೂ ಪರಿಷತ್ ಮುಖಂಡರ ನಾಯಕತ್ವದಲ್ಲಿ ಆರೆಸ್ಸೆಸ್ಸಿಗರು ನಡೆಸಿದ ಈ ಪೈಶಾಚಿಕ ಕೃತ್ಯದಿಂದ, ಮುಸ್ಲಿಮರ ಹಾಗೂ ದಲಿತರ ಮೇಲೆ ಅಮಾನುಷ ದೌರ್ಜನ್ಯವೆಸಗುವುದೇ ಅವರ ಧ್ಯೇಯ ಎಂಬ ಕಟು ಸತ್ಯವನ್ನು ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ.

ಇಂತಹ ಕ್ಷುಲ್ಲಕ ಕಾರಣಗಳಿಗೆಲ್ಲಾ ಊರಲ್ಲಿ ಅಶಾಂತಿ ಹುಟ್ಟಿಸಿ, ಗಲಭೆ ಎಬ್ಬಿಸಲು ವಿದ್ಯಾರ್ಥಿಗಳನ್ನು ಬಳಸಲಾಗುತ್ತಿದೆ. ಶಾಂತಿ, ಸೌಹಾರ್ದ, ಪರಮತ ಸಹಿಷ್ಣುತೆಯ ಸಾಕಾರಮೂರ್ತಿ ಸ್ವಾಮಿ ವಿವೇಕಾನಂದರ ಹೆಸರಲ್ಲಿ ಪುತ್ತೂರಿನಲ್ಲಿರುವ ಕಾಲೇಜಿನಲ್ಲಿ ಎಲ್ಲಾ ವಿಷಬೀಜಗಳೂ ಮೊಳೆಯುತ್ತಿವೆ. ತೋರಿಕೆಗೆಂದು ಸೇರಿಸಿಕೊಂಡ 14 ಮಂದಿ ಮುಸ್ಲಿಂ ವಿದ್ಯಾರ್ಥಿಗಳನ್ನು ಬಿಟ್ಟರೆ ಇತರ ಎಲ್ಲರೂ ಚಡ್ಡಿಹಾಕಿ, ದೊಣ್ಣೆಬೀಸುವವರೆ. ಹಗಲು, ರಾತ್ರಿಯೆನ್ನದೆ ಇಲ್ಲಿ ಕವಾಯತು ನಡೆಯುತ್ತಿರುತ್ತದೆ. ಒಬ್ಬ ಕ್ರೈಸ್ತ ಪ್ರಾಧ್ಯಾಪಕನನ್ನು ಬಿಟ್ಟರೆ,ಉಳಿದೆಲ್ಲಾ ಸಿಬ್ಬಂದಿಗಳೂ ಹಿಂದುತ್ವದ ಉಪಾಸಕರೆ. ಬೆಳಿಗ್ಗೆ ಮತ್ತು ಸಾಯಂಕಾಲ ಸ್ವತಃ ಚಡ್ಡಿಹಾಕಿ ಕವಾಯತಿನ ನೇತೃತ್ವ ವಹಿಸುವ ಇಲ್ಲಿನ ಪ್ರಾಂಶುಪಾಲರು ಪೇಟೆಯಲ್ಲಿ ಗಲಭೆಯಾದಂದು ಬೆಳಿಗ್ಗೆ ಕಾಲೇಜಿಗೆ ರಜೆ ಸಾರಿ, ವಿದ್ಯಾರ್ಥಿ ಅಸೆಂಬ್ಲಿ ಕರೆದು, "ನಮ್ಮ ಹಿಂದೂ ಸಹೋದರ ಬಾಳಪ್ಪ ಪೂಜಾರಿಯನ್ನು ಇಸ್ಲಾಮಿಗೆ ಮತಾಂತರಿಸಿದ್ದಾರೆ, ತೆರಳಿ, ಹಿಂದೂಯಿಸಂನ್ನು ಉಳಿಸಿಕೊಳ್ಳಿ" ಎಂದು ಘೋಷಿಸಿದರಂತೆ. ಕಾಲೇಜಿನ ಟ್ರಸ್ಟಿಗಳಲ್ಲಿ ಶಾಸಕರೂ ಒಬ್ಬರು.

ಪುತ್ತೂರಿನ ಜಾತಿ ವೈಷಮ್ಯ ಇಂದು ನಿನ್ನೆಯದಲ್ಲ, ಒಂದೆರಡು ವರ್ಷಗಳಿಂದಲಾಗ್ಯಾತು ಭುಗಿಲೇಳುತ್ತಿದೆ. ಮೌಲವಿಗಳನ್ನು ಕಂಡರೆ ಅವರ ಪೇಟಾ, ಗಡ್ಡ ಎಳೆಯುವುದು, ಹೆಂಗಸರ ಘೋಷವನ್ನು ಹೀಯಾಳಿಸುವುದು, ಮುಸ್ಲಿಂ ಚಾಲಕರ ರಿಕ್ಷಾದಲ್ಲಿ ಹಿಂದೂ ಸ್ತ್ರೀಯರು ಹೋದರೆ ಆ ಚಾಲಕರಿಗೆ ಥಳಿಸುವುದು, ಗಣಪತಿ ಉತ್ಸವ, ಶಾರದಾ ಮೆರವಣಿಗೆಯ ಹಿಂದೆ ಹಿಂತು, ಮುಸ್ಲಿಮರ ಅಂಗಡಿ, ಹೋಟೆಲು, ಮಸೀದಿಗಳಿಗೆ ಹಾನಿಗೊಳಿಸುವುದು, ಮಸೀದಿಯಲ್ಲಿ ಬಾಂಗ್‌ಕೊಡುವಾಗ ಅದೇ ಧಾಟಿಯಲ್ಲಿ ಕಿರುಚುವುದು, ರಾತ್ರಿ ನಮಾಜಿಗೆ ಹೋಗಿ ಬರುವವರಿಗೆ ಭಜನಾ ಮಂದಿರದಲ್ಲಿ ಅವಿತು ಕಲ್ಲುಹೊಡೆಯುವುದು ಇತ್ಯಾದಿ ಅವ್ಯಾಹತವಾಗಿ ಪ್ರತಿದಿನ ಗೈಯುತ್ತಿದ್ದ ಈ ಆರೆಸ್ಸೆಸ್ ಗುಂಪು, ಶಾಸಕರ ತುಂಬು ಆಶೀರ್ವಾದ ಮತ್ತು ಶ್ರೀಮಂತ ವರ್ತಕರ ಧನಬಲದಿಂದ ಒಂದು ವರ್ಷದ ಹಿಂದೆ ಒಂಭತ್ತು ಎಳೆಮಕ್ಕಳ ಬಡಪಾಯಿ ತಂದೆ, ಕೂಲಿಕೆಲಸದ ಅಬ್ದುಲ್ ರಹಿಮಾನ್‌ನನ್ನು ಇರಿದು ಕೊಲೆಮಾಡಿತ್ತು. ಇದೀಗ ಬಾಳಪ್ಪ ಪೂಜಾರಿಯ ಮತಾಂತರದ ಪ್ರತಿಭಟನಾರ್ಥ ಈ ಹಗಲು ದರೋಡೆ, ಲೂಟಿ, ಕೊಳ್ಳೆಯಿಡುವಿಕೆ ನಡೆಸಿದರು.

ಮುಸ್ಲಿಮರಿಂದಲೇ ಪೋಸ್ಟರು ಹಚ್ಚಿಸಿ, ಮುಸ್ಲಿಮರಿಂದಲೇ ಓಟನ್ನು ಗಿಟ್ಟಿಸಿ, ಆಳುತ್ತಿರುವ ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಮುಸ್ಲಿಮರ ಬದುಕಿಗೆ ಭದ್ರತೆಯಿಲ್ಲದಾಗಿದೆ ಎನ್ನಲು ವಿಷಾದವಾಗುತ್ತದೆ.

ವರದಿ : —ಇಶಾ

ಕಾರ್ಮಿಕರ ಹೆಚ್ಚುತ್ತಿರುವ ಹೋರಾಟಗಳು

(3ನೇ ಪುಟದಿಂದ)

ತಮ್ಮ ಸಂಗಾತಿಗಳ ವಜಾದ ವಿರುದ್ಧ, ಬೆಂಗಾಲ್ ಲ್ಯಾಂಪ್ ಕಾರ್ಮಿಕರು ಲಾಕೌಟ್ ವಿರುದ್ಧ, ಪಶ್ಚಿಮ ಬಂಗಾಳದ 10,000 ಸಿನಿಮಾ ಕಾರ್ಮಿಕರು ಹಾಗೂ ಹೈದರಾಬಾದಿನ ಹಿಂದೂಸ್ತಾನ್ ಕೇಬಲ್ಸ್ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ, ಮದ್ರಾಸಿನ ಬಕ್ಕಿಂಗಂ ಮಿಲ್ಲಿನ ಹಾಗೂ ಬೆಂಗಳೂರಿನ ಬಿನ್ನಿಮಿಲ್ ಕಾರ್ಮಿಕರು ಕಾರ್ಖಾನೆ ಮುಚ್ಚುವುದರ ವಿರುದ್ಧ ತೀವ್ರ ಹೋರಾಟಗಳನ್ನು ನಡೆಸಿದ್ದಾರೆ; ಕೆಲವು ಈ ಹೋರಾಟಗಳು ಇನ್ನೂ ಮುಂದುವರಿಯುತ್ತಿವೆ.

ರೈತರಿಗೆ ಬೆಂಬಲ

ಕಾರ್ಮಿಕರಂತೆಯೇ ಸರಕಾರದ ದಿವಾಳಿಕೋರ ಆರ್ಥಿಕ ನೀತಿಗಳಿಂದ ದುಃಸ್ಥಿತಿಗಿಳಿದಿರುವ ರೈತರು ತಮ್ಮ ಮೇಲೆ ಹೆಚ್ಚುತ್ತಿರುವ ಶೋಷಣೆಯನ್ನು ದೇಶಾದ್ಯಂತ ಪ್ರತಿಭಟಿಸಿದ್ದಾರೆ. ಇಂತಹ ಸಂದರ್ಭಗಳಲ್ಲೆಲ್ಲಾ ಕಾರ್ಮಿಕವರ್ಗ ಅವರ ಬೆಂಬಲಕ್ಕೆ ನಿಂತಿದೆ. ಕರ್ನಾಟಕ, ಮಹಾರಾಷ್ಟ್ರ ಹಾಗೂ ಇತರೆಡೆ ನಡೆದ ರೈತಜಾಥಾಗಳಲ್ಲಿ ಅದೇರೀತಿ ಮಾರ್ಚ್ 26ರಂದು ದೆಹಲಿಯಲ್ಲಿ ನಡೆದ ಲಕ್ಷಾಂತರ ರೈತರ ಪಾರ್ಲಿಮೆಂಟ್ ಚಲೋದ ಸಮಯದಲ್ಲಿ ಈ ಬೆಂಬಲ ಸ್ಪಷ್ಟವಾಗಿ ಕಂಡುಬಂತು. ದೆಹಲಿ, ಹರಿಯಾಣಾ ಹಾಗೂ ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಕೆಲವು ಕಾರ್ಮಿಕರು ಒಂದು ದಿನದ ಮುಷ್ಕರ ಆಚರಿಸಿ ರೈತರ ಜಾಥಾದಲ್ಲಿ ಭಾಗವಹಿಸಿದರು. ಇತ್ತೀಚಿನ ಎಲ್ಲ ಜಂಟೀ ಮತಪ್ರದರ್ಶನಗಳಲ್ಲಿ ಹಾಗೂ ಸಮಾವೇಶಗಳಲ್ಲಿ ಕೃಷಿಕಾರ್ಮಿಕರ ಹಾಗೂ ರೈತರ ಬೇಡಿಕೆಗಳನ್ನು ಎತ್ತಲಾಗುತ್ತಿದೆ.

ಹೊಸ ಅಧ್ಯಾಯ

ತಮ್ಮ ವೈಯಕ್ತಿಕ ಹೋರಾಟಗಳ ಮೂಲಕ ಸರಕಾರದ, ಆಳುವವರ್ಗಗಳ ಹಾಗೂ ಅವುಗಳ ಸಂಸ್ಥೆಗಳ ನಿಜರೂಪವನ್ನು ಅರಿತ ಕಾರ್ಮಿಕ ವರ್ಗದ ವಿವಿಧ ವಿಭಾಗಗಳ ಸಂಘಟನೆ ಒಂದು ಕೈಗಾರಿಕೆಗೆ, ಒಂದು ಪ್ರದೇಶ ಅಥವಾ ಒಂದು ರಾಜ್ಯಕ್ಕೆ ಸೀಮಿತವಾದ ಹೋರಾಟಗಳು ಈ ಹಿಂದಿನ ಎಲ್ಲಾ ಸಾಧನೆಗಳನ್ನು ಮಣ್ಣುಗೂಡಿಸಲು ಸರ್ವಪ್ರಯತ್ನ ನಡೆಸುತ್ತಿರುವ ಸರಕಾರದ ಹಲ್ಲೆಗಳನ್ನು ಎದುರಿಸಲು ಅಶಕ್ತವಾಗುತ್ತವೆ ಎಂಬುದನ್ನು ಮನಗಂಡರು; ಇದರ ಸಂಕೇತವೇ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಕೈಗಾರಿಕಾ ಮಹಾಸಂಘಗಳ ಮುಂಬೈ ಸಮಾವೇಶ. ಇದು ಭಾರತದ ಕಾರ್ಮಿಕ ಚಳುವಳಿಯ ಒಂದು ಹೊಸ ಅಧ್ಯಾಯದ ಆರಂಭದ ಸಂಕೇತವೂ ಹೌದು. ಈ ಸಮಾವೇಶದ ಕರೆಯ ಮೇರೆಗೆ ಮೊನ್ನೆ ನವೆಂಬರ್ 23ರ ಬೃಹತ್ 'ಪಾರ್ಲಿಮೆಂಟ್ ಚಲೋ' ಅತ್ಯಂತ ಯಶಸ್ವಿಯಾಗಿ ಜರುಗಿತು. ಮುಂದಿನ ಪ್ರಮುಖ ಹೆಜ್ಜೆ ಜನವರಿ 19ರ ಅಖಿಲ ಭಾರತ ಕೈಗಾರಿಕಾ ಸಾರ್ವತ್ರಿಕ ಮುಷ್ಕರ-ಭಾರತದ ಆಳುವ ವರ್ಗಗಳಿಗೆ ದುಡಿಯುವ ವರ್ಗಗಳ ಎಚ್ಚರಿಕೆಯ ಗಂಟೆ!

ಕಲ್ಲು ಕೆಲಸಗಾರರ ಸಂಘ

ಬಂಟ್ವಾಳ ತಾಲ್ಲೂಕಿನ ಮೊಂಟೆಪದವಿನಲ್ಲಿ ತಾ. 18-12-1981ರಂದು ಶ್ರೀ ಎಸ್. ಮಹಾಬಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಕಲ್ಲು ಕಡಿಯುವವರ ಹಾಗೂ ಕಲ್ಲಿನ ಕೆಲಸಕ್ಕೆ ಸಂಬಂಧಪಟ್ಟ ಮಜೂರರ ಸಭೆಯು ನಡೆಯಿತು. ಈ ಕೆಲಸಗಾರರ ಟ್ರೇಡ್ ಯೂನಿಯನ್ ಒಂದನ್ನು ರಿಜಿಸ್ಟ್ರಿ ಮಾಡಲು ನಿರ್ಣಯಿಸಿ ಶ್ರೀ ಎಸ್. ಮಹಾಬಲೇಶ್ವರ ಭಟ್ಟರು ಅಧ್ಯಕ್ಷರಾಗಿಯೂ ಶ್ರೀ ಯು.ಬಿ. ಲೋಕಯ್ಯ ಕಾರ್ಯದರ್ಶಿಯಾಗಿಯೂ ಇರುವ ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕು ಸ್ಟೋನ್‌ಕ್ವಾರಿ ವರ್ಕರ್ಸ್ ಯೂನಿಯನ್ ಎಂಬ ಯೂನಿಯನನ್ನು ರಿಜಿಸ್ಟ್ರಿ ಮಾಡಲು ನಿರ್ಣಯಿಸಲಾಯಿತು.

ಯಾವ ಸವಲತ್ತು ಇಲ್ಲದೆ ದುಡಿಯುವ ಈ ಮಜೂರರ ಬೇಡಿಕೆಗಳನ್ನು ಚರ್ಚಿಸಿ ಸರ್ಕಾರದ ಮತ್ತು ಮಾಲಕರ ಮುಂದೆ ಇಡಲು ನಿರ್ಣಯಿಸಲಾಯಿತು. ಸಭೆ ಕರೆದ ಉದ್ದೇಶವನ್ನು ಶ್ರೀ ಎಂ. ವೆಂಕಪ್ಪ ಶೆಟ್ಟಿಯವರು ವಿವರಿಸುತ್ತಾ ಕಲ್ಲು ಕಡಿಯುವವರ ಸಂಘಟನೆಯ ಅವಶ್ಯಕತೆಯನ್ನು ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ

(5ನೇ ಪುಟದಿಂದ)

ರಿಂದ ರೂ. 65ರಷ್ಟು ಅಂತರ. ತುಟ್ಟಿ ಭತ್ತೆ ವಿಷಯದಲ್ಲಿ ನೆಲೆಯಿಲ್ಲದ ನೀತಿ. ಒಟ್ಟು ಸಂಭಾವನೆಯಲ್ಲಿ ಬಹಳಷ್ಟು ವ್ಯತ್ಯಾಸವಿರುವಾಗ, ಕೇಂದ್ರ–ರಾಜ್ಯ ನೌಕರರು ಕೊಂಡುಕೊಳ್ಳುವ ವಸ್ತುಗಳ ಬೆಲೆಯಲ್ಲಿ ವ್ಯತ್ಯಾಸವಿದೆಯೇ ? ಇಲ್ಲ. ಹಾಗಾದರೆ ಕಡಿಮೆ ಪಗಾರದ ರಾಜ್ಯ ಸರಕಾರಿ ನೌಕರರಿಗೆ ಅನ್ಯಾಯವಾಗುವುದಿಲ್ಲವೇ ? ಈ ಅನ್ಯಾಯ ಸರಿಪಡಿಸಲು ಹೋರಾಟ ನಡೆದಿದೆ.

ತಮಗೆ ಈಗ ಕೊಡಲಾಗುತ್ತಿರುವ ಅಲಾವನ್ಸುಗಳು,ದಿನಭತ್ತೆಗಳು ಸಾಕಾಗುವುದಿಲ್ಲ, ಅದು ಹೆಚ್ಚಾಗಬೇಕೆಂದು ಲೋಕಸಭೆಯ ಕಾಂಗ್ರೆಸ್ ಸದಸ್ಯರು ಲೋಕಸಭೆಯಲ್ಲಿ ಕೇಳಿಕೊಂಡಿದ್ದಾರೆ. ರಾಜ್ಯಗಳಲ್ಲಿ ವಿಧಾನಸಭೆ ಸದಸ್ಯರೂ ಇದೇ ಕೂಗನ್ನೆಬ್ಬಿಸಿದ್ದಾರೆ. ಸರಕಾರಿ ನೌಕರರ ಬೇಡಿಕೆ ಕುರಿತು ಇವರಾರೂ ಸಹಾನುಭೂತಿ ತೋರಿಸುತ್ತಿಲ್ಲ.

ಈ ಮಧ್ಯೆ ರಿಪಬ್ಲಿಕನ್ ಪಾರ್ಟಿಯ ಆರ್ಮುಗಂ, ಹಾಗೆಯೇ ಹಿಂದುಳಿದ ವರ್ಗಗಳ ಕೆಲವು ನೌಕರರು ನಿವೃತ್ತಿ ವಯಸ್ಸು 58 ಆಗಬೇಕೆಂಬ ಬೇಡಿಕೆಯನ್ನು ವಿರೋಧಿಸುತ್ತಿದ್ದಾರೆ. 28 ವಯಸ್ಸಿನಲ್ಲೇ ನೌಕರಿ ಪಡೆದವರಿಗಷ್ಟೇ ಈ ಸೌಲಭ್ಯ ಸಿಗಬೇಕೆಂಬುದು ಅವರ ವಿಚಾರ.

ಇವರ ಈ ವಿಚಾರ ಸರಿಯಲ್ಲ. ನೌಕರಿ ಪಡೆಯುವಲ್ಲಿಯೂ, ಬಡ್ತಿಯಲ್ಲಿಯೂ, ಹಿಂದುಳಿದವರಿಗೆಲ್ಲ ಹೆಚ್ಚಿನ ಸೌಲಭ್ಯ, ಮೀಸಲಾತಿ ಬೇಕೇಬೇಕು. ಆದರೆ ಈಗಾಗಲೇ ಸೇವೆಯಲ್ಲಿದ್ದ ಇತರ ಜಾತಿಯವರಿಗೆ ಬಡ್ತಿಯ ಹಕ್ಕನ್ನು ನಿರಾಕರಿಸುವುದು ಸರಿಯಲ್ಲ. ಆಡಳಿತೆಯ ಮೇಲೂ ಇದರ ಕೆಟ್ಟ ಪರಿಣಾಮವಾಗುತ್ತದೆ. ಇಂಥವರಿಗೆ ಬಡ್ತಿ ನೀಡಲು ಸರಕಾರದವರು ವಿಶೇಷ ಸ್ಥಾನ ನಿರ್ಮಿಸಬೇಕೆಂದು ಸಿ. ಐ. ಟಿ. ಯು. ಕಾರ್ಮಿಕ ಸಂಘಟನೆ ಸರಕಾರಕ್ಕೆ ಸೂಚಿಸಿದೆ.

ನೌಕರರ ಸಂಘಟನೆಯಲ್ಲಿ ಬಿರುಕು ಕಂಡುಹಿಡಿದು ಅದನ್ನು ಮುರಿಯಲು ಪ್ರಯತ್ನಿಸುವ ಬಂಡವಾಳಶಾಹಿ ಸರಕಾರಕ್ಕೆ ಆರ್ಮುಗಂ ಮತ್ತು ಹಿಂದುಳಿದವರ ಪ್ರತಿಪಾದಕರೆನ್ನಿಸಿಕೊಳ್ಳುವ ಮುಖಂಡರು ಸರಳ ದಾರಿ ತೋರಿಸಿದಂತಾಗುತ್ತದೆ. ಹೋರಾಟಕ್ಕೆ ಇದು ಅಪಾಯಕಾರಿ..

ರಾಜ್ಯ ಸರಕಾರಿ ನೌಕರರ ಬೇಡಿಕೆ ನ್ಯಾಯವಾದದ್ದು. ಅವರಿಗೆ ಜಯ ಸಿಗಬೇಕು. ಆ ಜಯಕ್ಕೆ ಇತರ ನೌಕರರ, ಜನರ ಬೆಂಬಲ ಅಗತ್ಯ.

ಇಸ್ರಾಯೇಲ್‌ನಿಂದ ಆಕ್ರಮಣದ ಪುನರಾವರ್ತನೆ

(1ನೇ ಪುಟದಿಂದ)

ಬುದು ಇಸ್ರಾಯೇಲಿಗೆ ಗೊತ್ತಿದೆ. ಇಸ್ರಾಯೇಲಿನ ಇಂದಿನ ತನಕದ ಎಲ್ಲಾ ದುರಾಕ್ರಮಣಗಳಿಗೂ, ಜಾಗತಿಕ ಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿರುವುದಕ್ಕೂ ಅಮೇರಿಕಾ ಸಾಮ್ರಾಜ್ಯಶಾಹಿಯು ಅದಕ್ಕೆ ಕೊಡುತ್ತಾ ಬಂದಿರುವ ಪೂರ್ಣ ಬೆಂಬಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಅಮೇರಿಕಾ ಸಂಯುಕ್ತ ಸಂಸ್ಥಾನವು ಕೊಡುತ್ತಿರುವ ಕೋಟಿಕೋಟಿ ಡಾಲರುಗಳು ಮತ್ತು ಇಸ್ರಾಯೇಲಿನಲ್ಲಿ ಸುರಿಯುತ್ತಿರುವ ಶಸ್ತ್ರಾಸ್ತ್ರಗಳಿಂದಲೇ ಇಸ್ರಾಯೇಲ್ ಜೀವಿಸುತ್ತಿದೆ.

ಇರಾಕಿನ ಅಣುಶಕ್ತಿ ಕೇಂದ್ರದ ಮೇಲೆ ಇಸ್ರಾಯೇಲ್ ಧಾಳಿಮಾಡಿದ ಮೇಲೆ, ಅರಬ್ ಜಗತ್ತಿನ ಜನಾಭಿಪ್ರಾಯವನ್ನು ಅರ್ಥಮಾಡಿ, ಇಸ್ರಾಯೇಲಿಗೆ ಸರಬರಾಜುಮಾಡಲು ಒಪ್ಪಿದ್ದ ಎಫ್-16 ಬಾಂಬರುಗಳನ್ನು ಕೊಡುವುದನ್ನು ಅಮೇರಿಕ ಸಂಯುಕ್ತ ಸಂಸ್ಥಾನ ಅಮಾನತು ಮಾಡಿತು. ಕೆಲವೇ ವಾರಗಳಲ್ಲಿ ಈ ಅಮಾನತು ಮಾಡಿದ ಕ್ರಮವನ್ನು ಅಮಾನತುಗೊಳಿಸಿ ಎಫ್-16 ಬಾಂಬರುಗಳನ್ನು ಒದಗಿಸಲಾಯಿತು. ಇದೇ ರೀತಿಯಲ್ಲಿ ಅಮೇರಿಕಾದವರ ಈಗಿನ ಅಸಂತೋಷವು ಕೃತಕವಾದದ್ದೆಂದೂ, ಕೆಲವೇ ವಾರಗಳಲ್ಲಿ ಎಲ್ಲವೂ ಮೊದಲಿನಂತಾಗುವುದೆಂದು ಇಸ್ರಾಯೇಲಿಗೆ ಗೊತ್ತಿದೆ.

ಇಸ್ರಾಯೇಲಿನ ಆತ್ಮವಿಶ್ವಾಸಕ್ಕೆ ಕಾರಣವಿದೆ. ಪಶ್ಚಿಮ ಏಶಿಯಾದಲ್ಲಿ ತನ್ನ ನಿಕಟವರ್ತಿ ಇಸ್ರಾಯೇಲ್ ಆಗಿದೆಯೆಂದೂ, ಮುಂದೆಯೂ ಹೀಗೆ ಆಗಿರಬೇಕೆಂಬುದೇ ಅಮೇರಿಕಾ ಸಂಯುಕ್ತ ಸಂಸ್ಥಾನದ ಧೋರಣೆಯಾಗಿದೆ. ಅಮೇರಿಕದ ಎಲ್ಲಾ ಆಡಳಿತಗಾರರೂ ಇಸ್ರಾಯೇಲಿನ ಬಗ್ಗೆ ತಮ್ಮ ನಿಲುವಿನಲ್ಲಿ ಮೂಲಭೂತ ಬದಲಾವಣೆಯನ್ನೇನೂ ಮಾಡುವುದಿಲ್ಲವೆಂದೂ, ಇಸ್ರಾಯೇಲಿನೊಂದಿಗೇ ಇರುವುದಾಗಿಯೂ ಆಶ್ವಾಸನೆ ಕೊಟ್ಟಿರುವರು. ಸಾಮ್ರಾಜ್ಯಶಾಹಿಗಳ ಈ ಬೆಂಬಲವೇ ಇಸ್ರಾಯೇಲಿನ ಆಕ್ರಮಣಕಾರಿ ನೀತಿಗಳನ್ನು ಮುಂದುವರಿಸಲು ಸಾಧ್ಯಮಾಡಿದೆ.

ಇಸ್ರಾಯೇಲಿನ ಇತ್ತೀಚಿನ ಆಕ್ರಮಣಕಾರಿ ನೀತಿಯು ಅರಬ್ ದೇಶಗಳ ಒಗ್ಗಟ್ಟು ಅದೆಷ್ಟು ಪ್ರಾಮುಖ್ಯ ಎಂಬುದನ್ನು ಮತ್ತೆ ತೋರಿಸಿದೆ. ಇಸ್ರಾಯೇಲಿನ ಈ ಆಕ್ರಮಣವು ಅರಬ್ ಜನಾಂಗವು ಎದುರಿಸುತ್ತಿರುವ ಅಪಾಯವನ್ನು ಎತ್ತಿತೋರಿಸಿದೆ. ಇಸ್ರಾಯೇಲಿನ ಆಕ್ರಮಣಕಾರಿ ಸಾಹಸಗಳು ಮತ್ತು ಅದರ ಬೆಂಬಲಿಗ ಅಮೇರಿಕಾ ಸಾಮ್ರಾಜ್ಯಶಾಹಿಗಳು ಅರಬ್ ಜನಾಂಗದವರ ಸ್ವಾತಂತ್ರ್ಯಕ್ಕೆ ಮತ್ತು ಆ ಪ್ರದೇಶದಲ್ಲಿನ ಶಾಂತಿಗೆ ಅದೆಷ್ಟು ಮಾರಕವಾಗಿವೆ ಎಂಬುದು ಸ್ಪಷ್ಟವಾಗಿದೆ. ಇಸ್ರಾಯೇಲ್ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ ಆಕ್ರಮಣಕಾರಿಗಳನ್ನು ಎದುರಿಸಿ, ನ್ಯಾಯ ಮತ್ತು ಸ್ಥಿರವಾದ ಶಾಂತಿ ನೆಲೆಸುವಂತೆ ಮಾಡಲು ಐಕ್ಯ ಪ್ರಯತ್ನ ನಡೆಯಬೇಕಾಗಿದೆ.

ಜನವರಿ 5ರೊಳಗೆ ಗೋಲನ್ ದಿನ್ನೆಗಳ ಬಗ್ಗೆ ಮಾಡಿರುವ ನಿರ್ಣಯವನ್ನು ಕೈಬಿಡುವಂತೆ ಜಾಗತಿಕ ಸಂಸ್ಥೆ ಮಾಡಿರುವ ನಿರ್ಣಯದ ಮಸೂದೆಯನ್ನು ಮುಂದಿಡುವುದರಲ್ಲಿ ಭಾರತ ದೇಶವೂ ಸೇರಿದೆ. ಸಮಾಜವಾದಿ ಮತ್ತು ಅಲಿಪ್ತ ರಾಷ್ಟ್ರಗಳೊಂದಿಗೆ ಸೇರಿ ಈ ನಿರ್ಣಯವನ್ನು ಕಾರ್ಯಗತಗೊಳಿಸುವತ್ತ ಭಾರತವು ಎಲ್ಲಾ ಪ್ರಯತ್ನಗಳನ್ನೂ ನಡೆಸಬೇಕೆಂದು ಆಶಿಸಲಾಗಿದೆ. ಭಾರತ ದೇಶದ ಜನತೆಯು ಇಸ್ರಾಯೇಲಿನ ಆಕ್ರಮಣಕಾರಿ ಧೋರಣೆ ಮತ್ತು ಸಿರಿಯಾದ ಜಾಗವನ್ನು ತನ್ನದನ್ನಾಗಿಸಿದ ಅದರ ಕ್ರಮವನ್ನು ಖಂಡಿಸಿ ಅರಬ ಜನತೆಯ ನ್ಯಾಯಯುತವಾದ ಹೋರಾಟ ಮತ್ತು ಬೇಡಿಕೆಗಳಿಗೆ ಸೌಹಾರ್ದ ಬೆಂಬಲ ಸೂಚಿಸಬೇಕು.

○

ಸಂಪಾದಕೀಯ

(1ನೇ ಪುಟದಿಂದ)

ಇಂದಿನ ಶೋಷಣಾಪೂರ್ಣ ವರ್ಗಸಮಾಜದ ಅಸ್ತಿತ್ವವನ್ನು ಕಾಯ್ದುಕೊಳ್ಳಲೆಂದು ಸಂಘಟಿತರಾಗುತ್ತಿರುವ ಇವರಿಂದ ಶೋಷಣಾರಹಿತ ಸಮಾಜ ರಚನೆಯು ಅಸಾಧ್ಯ. ಹಿಂದೂ ಯುವಜನರನ್ನು ಸಂಘಟಿಸುವ ನೆಪದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೂ, ಪ್ರಗತಿಪರ ವಿಚಾರಗಳ ಮೇಲೂ ಧಾಳಿ ಮಾಡುವುದೇ ಇವರ ಉದ್ದೇಶ. ಮುಂಬರುವ ದಿನಗಳಲ್ಲಿ ಇನ್ನೂ ತೀವ್ರ ಧಾಳಿ ನಡೆಸುವುದೇ ಮೇಳದ ತೀರ್ಮಾನ ಇರಬಹುದು.

ಯುವಜನತೆಯಲ್ಲಿ ಅತೃಪ್ತಿಯು ತುಂಬಿ, ಕಟ್ಟೆಯೊಡೆಯುತ್ತಿರುವ ಇಂದಿನ ಸಂದರ್ಭದಲ್ಲಿ ಅವರನ್ನು ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳು ದುರುಪಯೋಗಪಡಿಸದಂತೆ ನೋಡಿಕೊಳ್ಳುವುದು ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳ ಕರ್ತವ್ಯವಾಗಿದೆ. ಎಡಶಕ್ತಿಗಳು ಬೆಳೆದಂತೆಲ್ಲಾ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳು ಒಂದಾಗುತ್ತಿರುವುದೂ ಕಂಡುಬಂದಿದೆ. ಅಲ್ಪಸಂಖ್ಯಾತ ಮುಸ್ಲಿಮರಾಗಲೀ, ಸಾಮಾಜಿಕವಾಗಿ ತುಳಿಯಲ್ಪಟ್ಟ ಹಿಂದುಳಿದ ಜನರಾಗಲೀ, ಅವರವರು ತಮ್ಮದೇ ಕೋಮು ಮತ್ತು ಜಾತೀಯ ಸಂಘಟನೆಗಳನ್ನು ಕಟ್ಟಿದರೆ ಪರಿಹಾರವಿಲ್ಲ. ಬದಲು ಎಲ್ಲಾ ಜಾತಿಗಳ, ಎಲ್ಲಾ ಕೋಮಿನ, ಎಲ್ಲಾ ದುಡಿಯುವ ಜನಕೋಟಿಯೂ, ಜನಸಾಮಾನ್ಯರೂ ಒಂದಾಗಿ ವ್ಯವಸ್ಥೆಯನ್ನು ಬದಲಾಯಿಸಲು ಹೋರಾಡುವುದು ಅವಶ್ಯ. ಯುವಜನತೆಯು ಈ ಹೋರಾಟದ ಭಾಗವಾಗಿ ಬರುವಂತೆ ಮಾಡುವುದು ಎಡ ಪ್ರಜಾಪ್ರಭುತ್ವ ಶಕ್ತಿಗಳ ತುರ್ತಿನ ಕೆಲಸ.

●

ಮುಷ್ಕರ ಯಶಸ್ವಿಗೊಳಿಸಲು ಕರೆ

22-12-81ರಂದು ಉಡುಪಿಯಲ್ಲಿ ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯ ಸಭೆಯು ನಡೆದು ಜನವರಿ 19ರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕ್ರಿಯಾವೇದಿಕೆಯ ಸಂಚಾಲಕ ವಿಶ್ವನಾಥ ರೈ ವಹಿಸಿದ್ದರು.

ಜನವರಿ 6ರಿಂದ ಅನಿರ್ದಿಷ್ಟ ಅವಧಿಯವರೆಗೆ ಮುಷ್ಕರ ಹೂಡಲಿರುವ ಕರ್ನಾಟಕ ರಾಜ್ಯಸರಕಾರಿ ನೌಕರರ ಹೋರಾಟಕ್ಕೆ ಸಕ್ರಿಯ ಬೆಂಬಲ ವ್ಯಕ್ತಪಡಿಸಲಾಯಿತು. ಅಲ್ಲದೆ ಜನವರಿ 18ರಂದು ಕರ್ನಾಟಕ ವಿದ್ಯುತ್ ಮಂಡಳಿಯ ನೌಕರರು ನಡೆಸಲಿರುವ ಪ್ರತಿಭಟನಾ ಕಾರ್ಯಕ್ರಮವನ್ನು ಬೆಂಬಲಿಸಲು ನಿರ್ಧರಿಸಲಾಯಿತು.

ಜನವರಿ 19ರ ಮುಷ್ಕರದ ಪೂರಕವಾಗಿ 4-1-81ರಂದು ಮೆರವಣಿಗೆ ಸಭೆ ನಡೆಯಲಿದೆ.

○

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ರಾಷ್ಟ್ರವ್ಯಾಪೀ ವಿದ್ಯಾರ್ಥಿ ಮುಷ್ಕರ

(1ನೇ ಪುಟದಿಂದ)

ಕೇಂದ್ರಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಕಾಂ. ನೇಪಾಲ್ ದೇವ್ ಭಟ್ಟಾಚಾರ್ಯ ಮಂಡಿಸಿದ ಕರಡು ವರದಿ ಮತ್ತು ಸಹಕಾರ್ಯದರ್ಶಿ ಕಾಂ. ಸೀತಾರಾಮ್ ಯಚೂರಿಯವರು ಮಂಡಿಸಿದ 'ವಿದ್ಯಾರ್ಥಿ ಸಮುದಾಯಕ್ಕೆ ಮನವಿ' ಎಂಬ ವಿಶೇಷ ನಿರ್ಣಯದ ಮೇಲೆ ಚರ್ಚೆ ನಡೆಯಿತು.

ಕರಾಳ ಶಾಸನಗಳ ಮೂಲಕ ಜನತೆಯ ಚಳುವಳಿಯನ್ನು ದಮನ ಮಾಡುತ್ತಿರುವ ಇಂದಿರಾ ಸರ್ಕಾರದ ಸರ್ವಾಧಿಕಾರಿಕ್ರಮಗಳವಿರುದ್ಧ ದೇಶದ ವಿದ್ಯಾರ್ಥಿ ಸಮುದಾಯವು ವಿಶಾಲ ತಳಹದಿಯ ಐಕ್ಯ ಹೋರಾಟ ನಡೆಸಲು ಕರೆ ನೀಡುವ ವಿಶೇಷ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ದೇಶದ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೋಸ್ಕರ ಕಾರ್ಮಿಕ ವರ್ಗವು ಜನವರಿ 19ರಂದು ನಡೆಸಲಿರುವ ಐತಿಹಾಸಿಕ ಮುಷ್ಕರಕ್ಕೆ ಸೌಹಾರ್ದ ಬೆಂಬಲವಾಗಿ ರಾಷ್ಟ್ರವ್ಯಾಪೀ ಮುಷ್ಕರ ನಡೆಸಲು ಸಮ್ಮೇಳನ ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದೆ. ಸ್ವಾತಂತ್ರ್ಯ ನಂತರದ ಭಾರತದ ಇತಿಹಾಸದಲ್ಲೇ ಪ್ರಥಮ ಬಾರಿಗೆ ವಿದ್ಯಾರ್ಥಿಗಳ ರಾಷ್ಟ್ರವ್ಯಾಪೀ ಮುಷ್ಕರ ನಡೆಸುವ ಸಮ್ಮೇಳನದ ಐತಿಹಾಸಿಕ ನಿರ್ಣಯವನ್ನು ಯಶಸ್ವಿಗೊಳಿಸಲು ಪ್ರತಿನಿಧಿಗಳು ಪ್ರತಿಜ್ಞೆ ಸ್ವೀಕರಿಸಿದರು. ಈ ಕಾರ್ಯಕ್ರಮಕ್ಕೆ ಎಲ್ಲ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಸಂಘಟನೆಗಳ ಐಕ್ಯ ಕಾರ್ಯಾಚರಣೆಗೆ ಸಮ್ಮೇಳನ ಮನವಿ ಮಾಡಿತು.

ಸಮ್ಮೇಳನಕ್ಕೆ ಶುಭಕೋರಿ ಎಸ್.ಎಫ್.ಐ. ಸ್ಥಾಪಕ ಅಧ್ಯಕ್ಷ ಕಾಂ. ಸಿ. ಭಾಸ್ಕರನ್, ಕೇರಳದ ಮಾಜೀ ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್ ಮಾತನಾಡಿದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಕಾಂ. ಜ್ಯೋತಿಬಸು, ತ್ರಿಪುರಾ ಮುಖ್ಯಮಂತ್ರಿ ಕಾಂ. ನೃಪೇನ್ ಚಕ್ರವರ್ತಿ ಇವರುಗಳಲ್ಲದೇ ರೈತ, ಕಾರ್ಮಿಕ, ಯುವಜನ, ಮಹಿಳಾ, ಕೃಷಿಕೂಲಿಕಾರ ಸಂಘಟನೆಗಳಿಂದ ಶುಭಕೋರಿ ಸಂದೇಶಗಳು ಬಂದಿದ್ದವು. ಅಲ್ಲದೇ ಚೈನಾ, ಕ್ಯೂಬಾ, ವಿಯಟ್ನಾಂ, ಅಫಘಾನಿಸ್ತಾನ್, ಇರಾನ್, ಪ್ಯಾಲಿಸ್ತೀನ್, ಬ್ರಿಟನ್, ದ. ಆಫ್ರಿಕ ಈ ಮುಂತಾದ ದೇಶಗಳಿಂದ ಬಂದ ಸೌಹಾರ್ದ ಶುಭ ಸಂದೇಶಗಳೂ ಬಂದಿದ್ದವು.

ಸಮ್ಮೇಳನವು 69 ಜನರ ಹೊಸ ಕೇಂದ್ರಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಿತಲ್ಲದೇ ಕೇಂದ್ರಸಮಿತಿಯು 14 ಜನರ ಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸಿತು. ಕೇಂದ್ರಸಮಿತಿಯ ಅಧ್ಯಕ್ಷರಾಗಿ ಕಾಂ. ಎಂ. ಎ. ಬೇಬಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ನೇಪಾಲ್‌ದೇವ್ ಭಟ್ಟಾಚಾರ್ಯ ಪುನರಾಯ್ಕೆಯಾದರು.

ಕೊನೆಯಲ್ಲಿ ಸ್ವಾಗತಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಅಶೋಕ ಧವಳೆ ವಂದಿಸಿದರು.

ಡಿಸೆಂಬರ್ 27ರಂದು ಸಂಜೆ ಮೆರವಣಿಗೆ, ಬಹಿರಂಗ ಸಭೆಗಳು ನಡೆದವು. ಬಹಿರಂಗ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ಅಧ್ಯಕ್ಷ ಕಾಂ. ಎಂ. ಎ. ಬೇಬಿ ಮತ್ತು ಕಾಂ. ಇ. ಕೆ. ನಾಯನಾರ್ ಮಾತನಾಡಿದರು.

●

ಕಾರ್ಯಕರ್ತರ ಸಭೆ

ಅಖಿಲಭಾರತ ರೈತಸಂಘ (ಎ. ಐ. ಕೆ. ಎಸ್.)ದ ಆದೇಶದ ಪ್ರಕಾರ ಕರ್ನಾಟಕದಲ್ಲಿ ಕೃಷಿಕಾರ್ಮಿಕರ ಸಂಘಟನೆಯನ್ನು ಕಟ್ಟಲು ಪ್ರಾಂತ ರೈತಸಂಘದ ಕೌನ್ಸಿಲ್ ಸಭೆಯು (ಸೌಂದತ್ತಿಯ ಸೇರಿದ) ತೀರ್ಮಾನ ತೆಗೆದುಕೊಂಡಿತ್ತು. 27-12-81ರಂದು ಬೆಂಗಳೂರಿನಲ್ಲಿ ಪ್ರಾಂತ ರೈತಸಂಘದ ಪದಾಧಿಕಾರಿಗಳ ಸಭೆ ನಡೆದು 14-2-82ರಂದು ಬೆಂಗಳೂರಿನಲ್ಲಿ ಪ್ರಾದೇಶಿಕ (ಬೆಂಗಳೂರು, ಮಂಡ್ಯ, ತುಮಕೂರು ಮತ್ತು ಕೋಲಾರ ಜಿಲ್ಲೆಗಳು) ಸಮ್ಮೇಳನ ನಡೆಯಲಿದೆ.

ಕಾರಣ 24-1-82ರಂದು ಮಧ್ಯಾಹ್ನ 1 ಘಂಟೆಗೆ ಬೆಂಗಳೂರಿನ ಸುಲ್ತಾನಪೇಟೆಯಲ್ಲಿರುವ ಕಚೇರಿಯಲ್ಲಿ ಬೆಂಗಳೂರು, ಮಂಡ್ಯ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಕೃಷಿಕೂಲಿಕಾರ ಕಾರ್ಯಕರ್ತರ ಸಭೆ ಕರೆಯಲಾಗಿದೆ.

ಸಂಬಂಧಪಟ್ಟವರು ಈ ಸಭೆಗೆ ಆಗಮಿಸಬೇಕು.

ಪಿ. ಜಗನ್ನಾಥ
ಖಜಾಂಚಿ
ಪ್ರಾಂತ ರೈತಸಂಘ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office: L-56, K. V. Temple Street, Sultanpet Bangalore-560 053. Phone-24154
EDITOR : M. K. BHAT